

ಸಂಪುಟ ೨೧ ಡಿಸೆಂಬರ್ ೧೯೫೯ ಸಂಚಿಕೆ ೯

ಕುಹಕಿಡಿಗಳು

ಕೈಲಾಸದಲ್ಲಿ ಕೈಲಾಸಂರವರು ಕನ್ನಡದೇಶದ ಇಂದಿನ ಸರಕಾರ, ಸಹಕಾರ, ಸಮಾಜಗಳನ್ನು ನೋಡಿ ಅಂದಿದ್ದಾಗ ನಕ್ಕಂತೆಯೇ ನಗುತ್ತಿರಬೇಕು, ಅಲ್ಲವೇ ?

* * * *

ಆಹ್ವಾನಿತ ಶತ್ರುಗಳ ಮುಂದೆ ಕಾರ್ಯಕ್ರಮವನ್ನು ನಡೆಸಿ ಪ್ರಾಣ ತೆಗೆಯುವ ರೀತಿಯನ್ನೇ

—ಚೀಣಿಯರೆದುರಿಗೂ ನಾವು ಮಾಡಿದರೆ ಚೆನ್ನು ಅನ್ನಿಸುತ್ತೆ.

* * * *

ಪಂಚಾಯಿತಿ ರಾಜ್ಯವು ಗ್ರಾಮಗಳಲ್ಲಿ ಆರಂಭವಾದ ಹಬ್ಬಕ್ಕೆ

—ಇಬ್ಬರು ಪುಢಾರಿಗಳನ್ನು ಪ್ರತಿಯೊಂದು ಗ್ರಾಮಕ್ಕೂ ಬಳುವಳಿಯಿತ್ತಿದ್ದಾರಂತೆ !

* * * *

ಗುಬ್ಬಾಲೆಯ ಹಿರಿಯಾತನೊಬ್ಬನು, ೬೦ ವರ್ಷಗಳನ್ನು ತನ್ನ ಮನೆ, ತನ್ನ ಹಿತ್ತಲು, ತನ್ನ ತೋಟಗಳಲ್ಲೇ ಕಳೆದಿರುವನಂತೆ

—ಸಾಯುವ ಮುನ್ನ ಮಾವನೂರಾದ ಹೆಬ್ಬಿ ಗ್ರಾಮವನ್ನು ಪೂರ್ತಿ ನೋಡಿಯೇ ಬಿಡುತ್ತೇನೆ ಎಂದು ಆತ ತನ್ನಾಕೆಗೆ ಹೇಳಿದನಂತೆ

—ಆಕೆ ಅಂದಳಂತೆ—"ಗುಬ್ಬಾಲೆಯನ್ನೂ ಮೊದಲು ಪೂರ್ತಿ ನೋಡಿ ಅಂದ್ರೆ" ಅಂತ.

* * * *

ಭಾರತವು ನೆಹ್ರೂಜೀಯವರ ನಾಯಕತ್ವದಲ್ಲಿ ಚೀಣೀ ಆಕ್ರಮದ ವಿಷಯದಲ್ಲಿ, ನಡೆಸಿರುವ ಮಾರ್ಗವನ್ನು ಮಾರ್ಷಲ್ ಟೀಟೋ ಅವರು ಬಲು ಪ್ರಶಂಶಿಸಿದ್ದಾರಂತೆ.

—ಕಾರಣ! ಕ್ರುಶ್ಚೇವ್‌ರವರು ಮೆದುವಾಗಲಿ, ಅವರ ಚೀಣೀ ಕಾಮಾಲೆ ಸ್ವಲ್ಪ ಇಳಿಯಲಿ ಎಂದಿರಬಹುದೇ?

* * * *

ಅಖಿಲ ಭಾರತ ಕಾಂಗ್ರೇಸ್ ಸಮ್ಮೇಳನವು ಮಾಜಿ ಅರಮನೆಯ ತೋಟದ ಆವರಣದಲ್ಲಿ ಏರ್ಪಾಡಾಗಿದೆಯಂತೆ.

—ಭಾರಿ ಜಾತ್ರೆ ಮುಗಿದ ಮೇಲೆ ಅಲ್ಲಿರುವ ನಿವೇಶನಗಳು ಹೆಚ್ಚು ಚಂದಾ ಕೊಟ್ಟವರಿಗೆ ಮೀಸಲಾಗಿದೆಯೆಂಬ ಸುದ್ದಿ ಖಚಿತವಲ್ಲವಂತೆ.

—ಸ್ವತಂತ್ರ ಪಕ್ಷದವರು ಹುಷಾರಾಗಿರಬೇಕು!!

* * * *

ತಲೆನೋವು, ತಲೆನೋವು ಅಂತ ಮಾವಯ್ಯ ದೀಪಾವಳಿ ಬೆಳಗ್ಗೆ ಎದ್ದು ತಲೆ ಚಚ್ಚಿಕೊಂಡಾಗ, ಆಕೆ ಬಂದು "ಯಾಕ! ಹೀಂಗ ಹೊಡಕೊಂಡೀರಿ? ಅಳಿಯಂದಿರು ಬರೂಕಾಗಲ್ಲ ಅಂತ ತಾರು ಕಳಿಸ್ಯಾರ! ಇನ್ನು ತಲೆನೋವು ಎಲ್ಲಿಂದ ಬರಬೇಕು" ಎಂದು ಹೇಳಿದಳಂತೆ.

* * * *

ಕುಂಭಕೋಣದಲ್ಲಿ ಸಚಿವರು

ಸುದ್ದಿ.

—ಸಚಿವರಲ್ಲಿ ಕುಂಭಕೋಣವೋ, ಪೇಳೋ ರಸಿಕಾ!

* * * *

ರಾಜಾಜೀಯವರ ವಾದ ನ್ಯಾಯವನ್ನು ಕೇಳಿದ ಬಳಿಕ, ಸುಹೃದಯ ನೆಹ್ರೂಜೀಯವರು ಭಾರತದಲ್ಲಿನ ಮುಖಮೋಹನ ರೇಖೆಯು ವಿಂಧ್ಯಾ ಬಳಿ ಇದೆಯೆಂದು ಹೇಳಿದರೆಂಬುದು, ಸತ್ಯವಾಗಬಹುದಾದರೂ, ದಿಟವಲ್ಲವಂತೆ!!

* * * *

ಕಾಂಗ್ರೆಸ್ ಅಧ್ಯಕ್ಷ ಪದವಿಗೆ ಶ್ರಿ ಸಂಜೀವ ರೆಡ್ಡಿಯವರನ್ನು ಪಂಡಿತ ನೆಹ್ರೂ, ಪಂತ್, ಮೊರಾರ್ಜಿಯವರು ಸೂಚಿಸಿದ ಮೇಲೆ, ತಮಿಳು, ಕನ್ನಡ, ಬೆಂಗಾಲಿ, ಗುಜರಾತಿ ಇತ್ಯಾದಿ ನಾಡಿನ ನಾಯಕರೆಲ್ಲರೂ ಸೂಚಿಸುತ್ತಾ ಇದ್ದಾರೆ.

—ಅದಕ್ಕೇ ನಾವೂ ಹ್ಞೂ ಅನ್ನುತ್ತೇವೆ

ಇದು ಕೇಳಿದ್ದಿರಾ!

ಮಿಟಿಕಲಾಡಿ ಮೀನಾಕ್ಷಮ್ಮನವರು ಹಸನ್ಮುಖರಾದರಂತೆ, ಪೋಲೀಸ್ ಪೇದೆಯೊಬ್ಬ ಬಂದು, "ನೀವೇನಾ ಮೀನಾಕ್ಷಮ್ಮನರು" ಎಂದು ಕೇಳಿದಾಗ. "ನಾನೇ" ಎಂದಳಂತೆ. ಆಗ ಹೆರಳಿನ ಮೇಲಿಟ್ಟಿದ್ದ ನಾಗರ ಜಡೆಬಿಲ್ಲೆ ಹೆಡೆಯೆತ್ತಿ ಕುಣಿದು ಸುರುಳಿಸುತ್ತಿಗೊಂಡಿತಂತೆ.

"ರಾಯರ ಸಂಜಿಮುಂದ, ಮಂದಿ ಜತಗೆ ಪಡಖಾನಿ ಹಾದಿಯಿಂದ ಬರ್ತಿದ್ದಾಗ ನಾಲ್ಕೂಜನ್ರ ಬಳಿ ಬಾಜಿ ಕಟ್ಟಿದರು ತಾಯಿ!" ಅಂದನಂತೆ "ಬಾಜಿ ಕಟ್ಟಿ ಸೋಲೋ ವರು ನಮ್ಮ ರಾಯ್ರಲ್ಲ" ಎಂದಳಂತೆ ಮೀನಾಕ್ಷಮ್ಮ; ಮೂಗಿನ ಮುಖರ ಹಾರಿ, ನವರಂಗ್ ಆಡಿದುವಂತೆ ಹೊಳೆದ ಬಣ್ಣದಲ್ಲಿ

"ಹಾದಿ ಪಕ್ಕದಾಗಿರೋ ಭಾವಿ ಕಟ್ಟೆಮ್ಯಾಗೆ ತುಂಬಾ ಬಗ್ಗಿ ಇಣಿಕಿ ಯಾರು ನೋಡ್ತಾರೊ ಅವಗೆ ಒಂದು ಬೆಳ್ಳಿ ಹೂವಿನ ನಶ್ಯದ ಡಬ್ಬ ಅಂತ ಅವರೆಲ್ಲಾ ಬಾಜಿ ಕಟ್ಟಾರಾ ತಾಯಿ!" ಎಂದನಂತೆ.

"ನಶ್ಯದ ಡಬ್ಬಿ ಅಂದರ ಪ್ರಾಣಾನಾದೂರೂ ಬಿಡ್ತಾರ ಇವರು" ಎಂದಳಂತೆ ಮಿಟಿಕಲಾಡಿ. ಕಿವಿ ಓಲೆಗಳ ಹರಳೆಲ್ಲಾ ಥಳ್ ಥಳ್ ಎಂದು ಮಿನುಗಿದುವಂತೆ "ರಾಯರೇ ಗೆದ್ದಾರ ಅವರೇ ತುಂಬಾ ಬಾಗಿ ಬಗ್ಗಿ ನೋಡಾರ," ಎಂದನಂತೆ.

"ಬಾಜಿ ಕಟ್ಟಿ ಸೋತು ಬಂದರ; ನಾ ನಗ್ತೀನಿ ಅಂತ ಗೊತ್ತದ ಅವರಿಗೆ" ಎಂದು ಮಿಟಿಕಲಾಡಿ ಕುಲುಕಿದಾಗ, ಕಂಚು ಬಡಿದ ಶಬ್ದ ಆಯಿತಂತೆ.

"ತುಂಬಾ ಬಗ್ಗಿನೋಡಿ, ಭಾವೀಗೆ ಬಿದ್ದಾರ, ಎತ್ತಿ ಹೊರಕ್ಕೆ ತಂದಾಗ ಸೊಲ್ಲೇ ಇದ್ದಿಲ್ಲ" ಎಂದನಂತೆ ಸುದ್ದಿ ತಂದವ ಬೇಗ ಹಿಂತಿರುಗುತ್ತಾ. "ಬಾಜಿ ಗೆದ್ದಮೇಲೆ ಯಾಕಾರ ಹೀಂಗ ಮಾಡಿದರು, ದೀಡು ಮೈನಿ ಊರಾಗೆಲ್ಲಾ ಕೊಚ್ಚಿಕೋತಿದ್ದೆ ನಲ್ಲಾ" ಎಂದು ಮಿಟುಕಲಾಡಿ ಅತ್ತಳಂತೆ.

* * * *

ಮುಖ್ಯ ಸಚಿವರು ಉತ್ತರದೇಶದ ಪ್ರವಾಸವನ್ನು ಮುಗಿಸಿಕೊಂಡು ಬರುವಾಗ ಹಲವಾರು ಹಾಸ್ಯದ ಚುಟಿಕೆಗಳನ್ನು ಕಲಿತು ಬಂದಿದ್ದರಂತೆ. ಪಕ್ಷದ ಸಭೆಯಲ್ಲಿ

ಭೋಜನವಾದ ಮೇಲೆ ಕಲಿತ ಹಾಸ್ಯದ ಚಟಾಕಿಗಳನ್ನೂ ಹಾರಿಸಿದಾಗ, ಎಲ್ಲರೂ ಘೊಳ್ಳೆಂದು ಬಿರಿಬಿರಿ ನಕ್ಕರಂತೆ. ಒಬ್ಬಾತ ಮಾತ್ರ ಮುಗುಮ್ಮಾಗಿದ್ದನಂತೆ.

ಮುಖ್ಯ ಸಚಿವರಿಗೆ ಕೋಪ ಬಂತಂತೆ. "ಯಾಕಯ್ಯಾ! ನಿನಗೆ ಹಾಸ್ಯ ಪ್ರವೃತ್ತಿ ಇಲ್ಲವೇ? ನಕ್ಕು ನಗಿಸುವುದೇ ಧರ್ಮ" ಎಂದು ಹೇಳಿದರಂತೆ.

"ಹಳಸಿದ ಹಾಸ್ಯದ ಚಟಾಕಿಗಳನ್ನು ಕೇಳಿ ನಾನು ನಗಬೇಕಾಗಿಲ್ಲ. ನಾಳೆ ಪಕ್ಷದ ಸಭೆಯಲ್ಲಿ ಅವಿಶ್ವಾಸ ನಿರ್ಣಯ ಮೂಡಿಸಿದಾಗ, ಅದರ ಫಲಿತಾಂಶ ಏನಾಗುತ್ತೆಂಬುದನ್ನು ತಿಳದ ನಾನು ಆಗ ನಗುತ್ತೇನೆ" ಎಂದು ಚಡಪಡಿಸಿದನಂತೆ.

* * * * * *

ಸತ್ತ ಹೆಣ ಕೂತಹಾಗೆ ಟೈಪ್‌ರೈಟರ್ ಮುಂದೆ ಕೂತಿದ್ದನಂತೆ, ಟೈಪಿಸ್ಟ್. ಅಧಿಕಾರಿ ಬಂದು, "ಆಯ್ತೆ! ನಾನು ಕಳಿಸಿದ್ದ ಕಾಗದ" ಎಂದು ಕೇಳಿದನಂತೆ. "ತುರ್ತು ಅಂತ ಹೇಳಿದ್ದೆನಲ್ಲಾ, ಮಾವನವರಿಗೆ ಇವತ್ತೇ ಕಳಿನಬೇಕಿತ್ತು, ದೆಹಲಿಯಲ್ಲಿ ಅವರಿಗೆ ಈ ಸುದ್ದಿ ತಿಳಿಯಬೇಕಿತ್ತು" ಎಂದು ಹೇಳಿದನಂತೆ ಅಧಿಕಾರಿ.

ಟೈಪಿಸ್ಟ್ ಸತ್ತವನಂತೇ ಕೂತಿದ್ದ. ತಿರುಗಿ ನೋಡಿ ಅಧಿಕಾರಿ ಕಾತುರನಾಗಿ "ಏನಾಯ್ತು? ಹೀಗಿದ್ದೀ!........ಇಧೀಯಾ?" ಅಂತ ಕೇಳಿದನಂತೆ.

ಟೈಪಿಸ್ಟ್ ಮೆಲುದನಿಯಲ್ಲಿ ಹೇಳಿದನಂತೆ "ಇವತ್ತು ಕಾಲು ನೋಯುತ್ತಿತ್ತು. ಔಷಧಿ ತರೋಣ ಅಂತ ಆಸ್ಪತ್ರೆಗೆ ಹೋಗಿದ್ದೆ. ಎಂ.ಬಿ.ಬಿ.ಎಸ್. ಪರೀಕ್ಷೆ ಅಂತೆ ಇವತ್ತು. ನಾಲ್ವತ್ತು ಹುಡುಗರು, ಇಪ್ಪತ್ತು ಹುಡುಗಿಯರು ಕಾಲು ನೋವಿನ ಕಾರಣವನ್ನು ಹಲ್ಲು ಕುಟ್ಟುತ್ತಾ ಕಂಡುಹಿಡಿಯಲೆತ್ನಿಸಿದರು. ಗಟ್ಟಿಯಾಗಿದ್ದ ಹಲ್ಲೆಲ್ಲಾ ಸಡಿಲವಾಗಿದೆ, ಅಳ್ಳಾಡುತ್ತಾ ಇದೆ. ಅದಕ್ಕೇ ಹೀಗಾಗಿದ್ದೀನಿ. ಚಪ್ಪಲೀ ಮರೆತುಬಂದೆ ಆಸ್ಪತ್ರೇಲಿ, ಅದರ ಉಂಗುರ ಕಳಚಿಹೋಗಿತ್ತು, ಈಗ ಕಾಲು ನೋವಿಲ್ಲ. ಹಲ್ಲೆಲ್ಲಾ ಅಳ್ಳಕ, ನೋವು, ಬಲು ನಿತ್ರಾಣ ಎಂದು ಸಣ್ಣಗೆ ಉಸುರಿದನಂತೆ.

ಮೈಸೂರು ಸಂಸ್ಥಾನದ ಪ್ರಜಾಧಾನಿಯಾದ ಬೆಂಗಳೂರಿನಲ್ಲಿ ಈ ತಿಂಗಳ ಕೊನೆಗೆ, ಮುಂದಿನ ತಿಂಗಳ ಮೊದಲಲ್ಲಿ, ಕಾಂಗ್ರೇಸ್ ನಾಯಕರು, ಕಮ್ಯೂನಿಸ್ಟ್ ನಾಯಕರು, ಸ್ವತಂತ್ರ ಪಕ್ಷದವರು ದೊಡ್ಡದೊಡ್ಡ ಸಭೆ ಹೂಡುವ ಪ್ರಯುಕ್ತ ಊರಿನವರೆಲ್ಲಾ ಚಂದಾ ಬೇನೆ ತಪ್ಪಿಸಿಕೊಳ್ಳಲು ಬೇರೆ ಊರಿಗೆ ಹೋಗುವ ಯತ್ನಗಳನ್ನು ಮಾಡುತ್ತಿದ್ದಾರಂತೆ!

* * * *

ರಕ್ಷಣಾ ಮಂತ್ರಿಗಳನ್ನು ಚೀಣಾಕ್ಕೆ ರಾಯಭಾರಿಯಾಗಿ ಕಳಿಸುತ್ತಾರೆಂಬುದು ಶುದ್ಧ ಕುಹಕದ ಸುದ್ದಿಯಂತೆ!

ಪುರಾಣದ ನವ್ಯ ಕತೆಗಳು

ಲಂಕಾದ್ವೀಪದಲ್ಲಿ ಅಶೋಕ ಮರದ ಕೆಳಗೆ ದುಃಖಪಡುತ್ತಾ ಕೂತಿದ್ದ ಸೀತೆಯನ್ನು ಕಾವಲುಗಾರ್ತಿ ರಾಕ್ಷಸಿಯರು ಬಹುವಾಗಿ ಸಂತೈಸಿ ಬಲು ಆಶೆ ತೋರಿದರೂ ಆಕೆ ಅಳುಮುಖವಾಗೇ ಇದ್ದಳಂತೆ.

ಮೂರು ದಿನಗಳಾದ ಮೇಲೆ ಮಾರುತಿ ಬಂದು ಮೋಸಪತ್ರಿಕೆಯೊಂದನ್ನು ಮರದ ಹತ್ತಿರ ಹಾಕಿ ಹೋದಾಗ, ಸೀತಾಮಾತೆ ಅದನ್ನು ತೆಗೆದುಕೊಂಡು ಓದಿಕೊಂಡಳಂತೆ ಶ್ರೀರಾಮ ಬರುವನೆಂಬುದನ್ನು ಓದಿ ತಿಳಿದು ನಗುಮುಖವಾದಳಂತೆ.

ನಗುಮುಖವನ್ನು ಕಂಡ ಕಾವಲುಗಾರ್ತಿ ರಾಕ್ಷಸಿ ಕೇಳಿದಳಂತೆ-" ರಾವಣ ಮಹಾರಾಜರಿಗೆ ಈಗ ಹೇಳಿ ಕಳಿಸಲೇ " ಎಂದು.

" ಬೇಡ ! ನಿನ್ನ ಮಹಾರಾಜರಿಗೆ ಇಷ್ಟರಲ್ಲೆ ನನ್ನ ರಾಜ ಹೇಳಿ ಕಳಿಸುತ್ತಾನೆ " ಅಂತ. ಅದು ಹೇಗೆ ಎಂದು ರಾಕ್ಷಸಿ ಕೇಳಿದಾಗ ಸೀತಾಮಾತೆ ಅಂದಳಂತೆ " ಪತ್ರಿಕೆ ಓದಿದೆ. ಬೇಸರ ಹೆಚ್ಚುವ ಮುನ್ನ ಮನಸ್ಸು ಕೆಡುವ ಮೊದಲೇ ಸರಿಯಾದ ಸಮಯದಲ್ಲಿ ನನ್ನ ರಾಜ ದಂಡೆತ್ತಿ ಬರುತ್ತಾನೆಂಬ ಸುದ್ದಿ ತಿಳಿಯಿತು " ಅಂತ.

ಅಶ್ವಮೇಧ

ಅಶರೀರವಾಣಿ ಕಛೇರಿಗೆ ಬುಸುಗುಡುತ್ತ ಬಂದು, ಕಾವಲುಗಾರರನ್ನು ಮೀರಿ ನಡೆದು ಹಿರಿಯಧಿಕಾರಿಯ ಕೊಠಡಿಗೆ ಬಂದಳಂತೆ, ದ್ರೌಪದಿ.

" ನಿಮ್ಮ ಕಛೇರಿ ಖರಾಬು ಆಗಿ ಹೋಗಿದೆ " ಎಂದು ಗುಡುಗಿದಳಂತೆ.

" ಯಾಕೆ ಹಾಗಂತೀರೀ ತಾಯಿ " ಎಂದನಂತೆ ನಡುಗುತ್ತಾ ಅಧಿಕಾರಿ.

" ಹೋದ ತಿಂಗಳು ನನ್ನ ಅರ್ಜುನ ಅಶ್ವಮೇಧಯಾಗದ ಅಶ್ವವನ್ನು ಹಿಂಬಾಲಿಸುತ್ತಾ ಮಣಿಪುರಕ್ಕೆ ಹೋಗುತ್ತೇನೆಂದು ಹೇಳಿದ್ದರು.

ನಿನ್ನೆ ಮಲಯಾಳದಿಂದ ಅಶರೀರವಾಣಿ ಕಛೇರಿಯಿಂದ ವೈಯಕ್ತಿಕ ಸುದ್ದಿಯನ್ನು ಪ್ರಸಾರ ಮಾಡಿದಾಗ, ಅಲ್ಲಿಂದ ಅರ್ಜುನ ಮಾತನಾಡಿದ ಹಾಗೆ ಕೇಳಿಸಿತು. ಮಣಿಪುರದ ಪ್ರಸಾರಠಾಣದಲ್ಲಿ ಇಷ್ಟು ಅವ್ಯವಸ್ಥೆ ಆಗಿದೆ. ನೀವು ಸುಮ್ಮನಿದೀರಲಾ ಎಂದು ಧಗಧಗಿಸಿದಳಂತೆ.

ಅಧಿಕಾರಿ ತೆರೆದಬಾಯಿ ಮುಚ್ಚಲಿಲ್ಲವಂತೆ !

ನವ್ಯ ಹರಿಶ್ಚಂದ್ರ

ಏಳರಾಟದ ಶನಿಕಾಡುತ್ತಾ ಇತ್ತು ಹರಿಶ್ಚಂದ್ರನನ್ನ. ಇದ್ದುದನ್ನೆಲ್ಲಾ ಕಳೆದುಕೊಂಡಿದ್ದ. ಆರ ಅಬ್ಜ ಸಾಲದ ಹೊರೆ ಬೊಂತೆ ಬೊಂತೆಯಾಗಿ ತಲೆ ಮೇಲೆ ಕೂತಿತ್ತು. ವಿಶ್ವಾಮಿತ್ರ ನಕ್ಷತ್ರೀಕನನ್ನು ಬೆಂಗಾವಲಿಗೆ ಬೆನ್ನಿಗೆ ಬಾಸುಂಡೆ ಬರಿಸುವುದಕ್ಕೆ ನಿಯಮಿಸಿದ್ದ.

ಆ ಹರಿಶ್ಚಂದ್ರನಿಗೆ ಲಾಯರು ಸಿಗಲಿಲ್ಲ. ಅಂದಮೇಲೆ ಹರಿಶ್ಚಂದ್ರ ಕಾವ್ಯಕ್ಕೆ ವಸ್ತು ದೊರಕಿತು. ಹರಿಕಥೆಗಳಿಗೆ ಆಯಕಟ್ಟು ಸಿಕ್ಕಿತು.

ಆದರೆ ನನ್ನ ಬಂದ ಮೇಲೆ, ಲಾಯರು ಕಾಣಿಸಿಕೊಂಡಾಗ, ಲಾಯರಿದುರಿಗೆ ಹೇಳಿಕೊಂಡ ಹರಿಶ್ಚಂದ್ರ, ತನ್ನ ಸಾಲದ ಹೊರೆಯ ವಿವರವನ್ನು ಕೊಟ್ಟ ಮಾತಿಗೆ ತಪ್ಪುವ ಪಾಪ ತನ್ನ ಬಿಡದೆ ಕಾಡಿಸುವುದೆಂದೂ ಸತ್ತರೂ ಬಿಡದೆ ಮುಂದಿನ ಜನ್ಮದಲ್ಲಿ ಮುಳ್ಳಿನ ಬಾಳನ್ನು ಕೊಡಿಸುವುದೆಂದು ವ್ಯಥೆಯಪಟ್ಟ.

ಆಗ ಲಾಯರು ಕಾನೂನು ಪುಸ್ತಕದ ಹಾಳೆಗಳನ್ನು ಎಂಜಲ ಬೆರಳಲ್ಲಿ ತಿರುವಿ ಹಾಕುತ್ತಾ, ಹಚ್ಚದೇ ಇದ್ದ ಸಿಗರೇಟನ್ನು ತುಟಿಯಲ್ಲಿ ಕಚ್ಚುತ್ತಾ ಯೋಚಿಸಿ, ಸಲಹೆ ಹೇಳಿದನಂತೆ.

" ಹರಿಶ್ಚಂದ್ರಾ! ಹೆದರಬೇಡ! ದಯಾಮಯ ಭಗವಂತ ನನಗೆ ಯೋಜನೆಯೊಂದನ್ನು ಕರುಣಿಸಿದ್ದಾನೆ. ಹಾಗೆ ಮಾಡೋಣ. ಋಣಮುಕ್ತನಾಗುವೆ ನೀನು!" ಎಂದು ಶುರು ಮಾಡಿದ ಲಾಯರು, ಮುಂದುವರೆಯುತ್ತಾ " ನೀನು ಆತ್ಮಹತ್ಯೆ ಮಾಡಿಕೊಂಡವನಂತೆ ನಟಿಸು. ನಿನ್ನನ್ನು ಚೆಂದದ ಚಟ್ಟದ ಮೇಲೆ ಕಟ್ಟಿ, ಸ್ಮಶಾನಕ್ಕೆ ಕರೆದೊಯ್ದು, ಗಂಧದ ಸೌದೆಯಲ್ಲೇ ಸುಡುವ ಏರ್ಪಾಡು ಮಾಡುತ್ತೇನೆ. ಸಾಲ ಕೊಟ್ಟವರು ನಿನ್ನ ಸ್ನೇಹಿತರಾಗಿದ್ದರೆ, ಸ್ಮಶಾನಕ್ಕೆ ಬರುವರು. ಕಡೆಯ ಕಾಣಿಕೆ ಹಾಕುವರು. ಆ ಕಾಣಿಕೆಯನ್ನು ನಾನು ಎಣಿಸಿ ನಿನಗೆ ಸೂಚನೆ ಕೊಡುತ್ತೇನೆ. ಚಟ್ಟದಿಂದ ಮೇಲಕ್ಕೇಳು ಆ ಹಣವನ್ನೆಲ್ಲಾ ಋಣ ತೀರಿಸುವುದಕ್ಕೆ ಉಪಯೋಗಿಸಿಕೋ!

ಯಾರೂ ಬರಲಿಲ್ಲ ಅಂತ ಇಟ್ಟುಕೋ! ಆಗ ಸ್ಮಶಾನದಲ್ಲಿ ನಾವಿಬ್ಬರೇ ಇರುವವರು. ನೀನು ಚಟ್ಟದಿಂದ ಏಳು. ಬೇರೆ ರಾಜ್ಯಕ್ಕೆ ಹೋಗುವ ಏರ್ಪಾಡು ಮಾಡಿಕೊಡುತ್ತೇನೆ. ಅಲ್ಲಿಗೆ ಹೋಗಿ ಬೇರೆ ಹೆಸರಿಟ್ಟುಕೊಂಡು ಸ್ವತಂತ್ರ ಪಕ್ಷಕ್ಕೆ ಸೇರಿಕೋ. ಮುಂದೆ ಬಾಳಿ ಬದುಕಬಹುದು, ಹುಚ್ಚು ಮುಂಡ್ರಾರ ರಾಜ್ಯದಲ್ಲಿ" ಎಂದೆಲ್ಲಾ ವಿಶದವಾಗಿ ಹೇಳಿದನಂತೆ.

ಹರಿಶ್ಚಂದ್ರ ಒಪ್ಪಿದನಂತೆ. ತಲೆದೂಗಿದನಂತೆ. ಆತ್ಮಹತ್ಯ ಮಾಡಿಕೊಂಡ ಹರಿಶ್ಚಂದ್ರ ಸಾಹುಕಾರ್ ಎಂದು ದೈನಂದಿನ ಪತ್ರಿಕೆಗಳೆಲ್ಲಾ ಹಿಂದಿನ ದಿವಸವೇ ದೊಡ್ಡದೊಡ್ಡ ಹೆಬ್ಬಾರ್ ಅಕ್ಷರಗಳಲ್ಲಿ ಸುದ್ದಿಯನ್ನು ಪ್ರಕಟಿಸಿದುವಂತೆ.

ಇವನ್ನು ಕಂಡ ಲಾಯರು, ಹರಿಶ್ಚಂದ್ರನ ಮನೆಗೆ ಬಂದು, ಚಂದ್ರಮತಿಗೆ ಹೇಳಿ, ರೋಹಿತಾಶ್ವನನ್ನೊಪ್ಪಿಸಿ, ಹರಿಶ್ಚಂದ್ರನು ಹಿಂದಿನ ದಿನವೇ ಆತ್ಮಹತ್ಯ ಮಾಡಿಕೊಂಡಂತೆ ಏರ್ಪಾಡೆಲ್ಲವನ್ನೂ ಮಾಡಿದನಂತೆ.

ಚಟ್ಟ ಸ್ಮಶಾನಕ್ಕೆ ಹರಿಶ್ಚಂದ್ರನನ್ನು ತಂದಾಗ, ಮಟಮಟ ಮಧ್ಯಾಹ್ನ ಮೂರು ಗಂಟೆಯಾಗಿತ್ತು. ಆದರೂ ಸಾಕಷ್ಟು ಸಾಲಗಾರರು ಕಣ್ಣೀರು ಸುರಿಸುತ್ತಾ ಬಂದಿದ್ದರು. ಇವನಂತಹ ಮಂಕುದಿಣ್ಣೆ ಸತ್ತುಹೋದರೆ ಯಾರ ತಲೆಗೆ ಟೋಪಿ ಹಾಕಿ ನಾವು ಬಾಳೋದು ಎಂದು ದಿಟವಾಗಲೂ ಅವರಿಗೆ ದುಃಖವಾಗಿತ್ತು. ಹದಿ

ನಾರು ಅಬ್ಜದಷ್ಟು ಹಣ ಇವನಿಂದ ಗಳಿಸಿದ್ದೇವೆ. ಕೇವಲ ಆರು ಅಬ್ಜಕ್ಕೆ ಹೆದರಿ ಸತ್ತನಲ್ಲಾ! ಎಂದು ಅವರು ಕನಿಕರಪಟ್ಟು ಕಡೆಯ ಕಾಣಿಕೆ ಸಲಿಸಲು ಬಂದಿದ್ದರು. ಸಲ್ಲಿಸಿದರು ಕಡೆ ಘಳಿಗೆಯಲ್ಲಿ.

ಲಾಯರು ಎಣಿಸಿಕೊಂಡ. ಏಳು ಅಬ್ಜದಷ್ಟು ಕೂಡಿತ್ತು. ಸನ್ನೆ ಮಾಡಿದ. ಚಟ್ಟದ ಮೇಲಿದ್ದ ಹರಿಶ್ಚಂದ್ರನ ಹಣೆ ಮುಟ್ಟಿ ತಟ್ಟಿದ. ಹಾಗೇ ಹಗ್ಗದ ಬಂಧನವನ್ನೂ ಸಡಿಲ ಮಾಡಿದ. ಒಂದು ಅಬ್ಜದಷ್ಟನ್ನು ಲಪಟಾಯಿಸಿದ. ಆಗ ಹರಿಶ್ಚಂದ್ರ ಎದ್ದು ಕುಳಿತ. ಅರಸನಾದ ತನಗೆಂದು ಬಂದಿದ್ದ ಕಾಣಿಕೆಯ ಆರು ಅಬ್ಜ ಹಣವನ್ನೆಲ್ಲಾ ಸಾಲಗಾರರಿಗೆಲ್ಲಾ ಹಂಚಿದ. ನಕ್ಷತ್ರೀಕನ ಗಲ್ಲವನ್ನು ಹಿಡಿದು ಚಿಗುಟುತ್ತಾ, ಹೋಲೆ....ಂಡೇರನ್ನು ಕಳಿಸಿಕೊಟ್ಟ ನಿಮ್ಮ ಯಜಮಾನನಿಗೆ ಸಾಲಬಡ್ಡಿ ಪೂರ್ತಿ ಹಿಂತಿರುಗಿ ಕೊಟ್ಟಿದ್ದೇನೆಂದು ಹೇಳು. ನಿನ್ನ ಸಂಬಳವನ್ನು ಇನ್ನು ಮೇಲೆ ಅವನೇ ಕೊಡಬೇಕು. ಅದೇ ಅವನಿಗೆ ಪ್ರಾಯಶ್ಚಿತ್ತ ಎಂದು ಹೇಳಿ ಋಣಮುಕ್ತನಾಗಿ, ರಾಜ್ಯದ ಆಡಳಿತವನ್ನು ತಿರುಗಿ ಶುರುಮಾಡಿದನಂತೆ.

* * * * * *

* ಅಬ್ಜ = ನೂರುಕೋಟಿ.

ನಾಗರ ಪಂಚಮಿ

ಹಬ್ಬದ ಸಿದ್ಧತೆಗಳನ್ನೆಲ್ಲಾ ಮಾಡಿ, ಸುಮುಹೂರ್ತದಲ್ಲಿ ಮನ್ಮಥನ ಅಕ್ಕ ಹೊಸಿಲ ಮೇಲೆ ಹೂರ್ಣದ ಕಡುಬನ್ನಿಟ್ಟು, ತಮ್ಮನನ್ನು ಕರೆದಳಂತೆ—"ಬಾ ಬಚ್ಚ ಭಂಡಾರ ಒಡೆದು, ಸಿಕ್ಕಿದ್ದು ದಕ್ಕಿಸಿಕೊಂಡು ಸುಖವಾಗಿ ಬಾಳಿಕೋ" ಅಂತ ಹೇಳುತ್ತಾ.

ಮನ್ಮಥ ಬಂದನಂತೆ. ಕುಕ್ಕುರುಗಾಲಿನಲ್ಲಿ ಕೂತನಂತೆ. ಭಂಡಾರ ಒಡೆದನಂತೆ. ಮೊಣಕ್ಕೆ ತರಿಯಿತಂತೆ. ಆ ವೇಗಕ್ಕೆ ಕಡುಬಿನ ಹೂರ್ಣ ಮೊಣಕೈಗೆ ಅಂಟಿಕೊಂಡಿತಂತೆ, ಚಿನ್ನದ ವರಹವಂತಿರಲಿ, ಬೆಳ್ಳಿಯ ರೂಪಾಯಿಯಂತಿರಲಿ, ನಯಾಪೈಸೆ ಕೂಡ ಇರಲಿಲ್ಲವಂತೆ. ಕಡೆಗೆ ಕವಡೆ ಕೂಡ ಇತ್ತಿಲ್ಲವಂತೆ ಆ ಭಂಡಾರದ ಕಡುಬಿನಲ್ಲಿ.

ಮನ್ಮಥ ಅಳುಮುಖನಾಗಿ "ಅಕ್ಕಾ! ಭಂಡಾರದಲ್ಲಿ ಏನೂ ಹಣ ಇಲ್ಲ. ಹುರಿ ಬಟಾಣಿ ಕೊಂಡುಕೊಂಡು ತಿನ್ನೋಣ ಅಂತಿದ್ದೆ" ಎಂದು ಹೇಳಿದನಂತೆ.

ಅಕ್ಕ ಅವನ ಗುಂಗುರು ಕೂದಲನ್ನು ನೇವರಿಸುತ್ತಾ "ತಮ್ಮಾ! ನೀನೇ ಭಂಡಾರ ತುಂಬುವ ಪುಣ್ಯ ಪಡೆದು ಬಂದವನು. ಭಂಡಾರದಲ್ಲಿ ನಿನಗೆ ಏನು ಸಿಗಬೇಕು? ನೀನೇ ಸಿಗಬೇಕು!! ಮೊಣಕ್ಕೆ ತರಿಚಿಕೊಂಡರೂ ಹೂರ್ಣ ಅಂಟಿಕೊಂಡಿದೆ ನೋಡಿದೆಯಾ!

"ತಮ್ಮಾ ತಂಟೆಗೆ ಸಿಗಬೇಡ ಸಿಕ್ಕಿದ್ದು ಬಿಡಬೇಡ" ಎಂದು ಆದರದ ಉಪದೇಶ ಮಾಡಿದಳಂತೆ.

—ಪ್ರಕಾಶ್

" ಸಾಧು ಸಂತರ ಸಭೆ "

" ಲಾಲ್‌ಬಾಗಿಲು ಎಲ್ಲಪ್ಪ ಇರೋದು ? "

" ಕಾವಿ ಹಾಕಿದ್ದೀಯ-ಜಂಗಮಯ್ಯಾ, ಲಾಲ್‌ಬಾಗಿನ ಷೋಕೀನೆ ನಿನಗೆ? "

" ಶಿವ ಶಿವಾ - ಅದಕ್ಕಲ್ಲಪ್ಪ - ಅಲ್ಲಿ ನಮ್ಮ ಜನವೆಲ್ಲಾ ಸಭೆ ಸೇರ್‍ತಾರಂತೆ ಓಗಾನಾಂತ...."

" ಸರ್ವಧರ್ಮ-ಸಾಧು ಸಂತರ-ಸಮಾರಾಧನೆ ? ... "

" ಅಲ್ಲ ಅಲ್ಲ ಸಭೆ...."

" ನಡೀರಿ ತೋರಿಸ್ತೀನಿ ನಾನೂ ಅಲ್ಲಿಗೇ ಹೋಗಬೇಕು "

" ಶಿವ-ಶಿವಾ-ಜಯ ಜಯ ಹರನಮಃ ಪಾರ್ವತೀ ಪತೇ ಹರಹರ ಮಹಾದೇವ ನಡೀರಿ........"

ವಿದ್ಯುತ್ ದೀಪಗಳಿಂದ ಅಲಂಕೃತವಾಗಿತ್ತು ನಂದಾದೀಪದಂತೆ ಜ್ಞಾನಜ್ಯೋತಿ ಹೀಗೆ ಬೆಳಗುತ್ತಿರಬಹುದೆ ? ಧರ್ಮಂ ರಕ್ಷತಿ-ಭಕ್ಷತಿ.

" ಅಲ್ಲ ಅಯ್ಯಪ್ಪನೋರೇ ಈ ಸಡಗರ-ಈ ಆಡಂಬರ-ಈ ದೀಪ-ಸಭೆ ಭಾಷಣ ಸರ್ವಸಂಗ ಪರಿತ್ಯಾಗಿ ಶಿವನ ಭಕ್ತರಿಗೇ ? ಶಿವ ಶಿವಾಂತ ಹಿಮಾಲಯದ ಮೂಲೇಲಿ ಮೂಗು ಹಿದಿದು ಕೂಡೋ ಮಂದೀ ಹೀಗೆ ಲಾಲ್‌ಬಾಗಿನಲ್ಲಿ ಕಾಂಗ್ರೆಸ್ಸ್ನ ಸಭೆ ನಡೆಸೋ ಹಾಗೇ ನಡೆಸೋದು ಸರಿಯೆ ? "

" ನಾವೂ ಇದ್ದೀವಿಂತ ಜನಕ್ಕೆ ಗೊತ್ತಾಗಬೇಡವೆ ? "

" ಮನೆ ಮನೆಗೆ ಹೋಗಿ ಶಿವ ಶಿವ ಗುರುಕಾರಣ್ಯದಲಿ ಭಿಕ್ಷೋ ಭಿಕ್ಷ ಅಂತ ಕೂಗಿದರೆ ನೀವಿರೋದು ಗೊತ್ತಾಗೊಲ್ವೆ ? "

" ನಮಗೂ ಸ್ವತಂತ್ರ ಬಂದಿದೆ–ನಮ್ಮ ಕೊರತೆ-ನಮ್ಮ ಹಕ್ಕು-ನಮ್ಮ ಬಿಕ್ಕಲು ಎಲ್ಲಿ ತೋಡಿಕೊಳ್ಳೋದು ? "

" ದೇವರ ಧ್ಯಾನಕ್ಕೆ ಲಾಲ್‌ಬಾಗೇ ಬೇಕೆ ? "

" ಸಾಧುಗಳೂ, ಜಂಗಮರೂ, ದಾಸಯ್ಯಗಳೂ, ಮುಲ್ಲಾಗಳೂ, ಅಯ್ಯಗಳೂ, ಸರ್ವ ಧರ್ಮದವರೂ ಸೇರಿ ಚರ್ಚಿಸಿ ನಮ್ಮ ಹಕ್ಕುಬಾಧ್ಯತೆ ಬಗೆ ಚರ್ಚಿಸಿದರೇನು ಈಗ ? "


" **ಚರ್ಚ್, ಹಕ್ಕು, ಬಾಧ್ಯತೆ ಸನ್ಯಾಸಿಗಳಿಗೇಕರೀ....ನೀವೇನು ರಾಜ್ಯಆಳಬೇಕೆ,** ಮಂತ್ರಿಗಳಾಗಬೇಕೆ? ದೇವರನ್ನ ನಂಬು, ಧರ್ಮದಿಂದಿರು ಅಂತ ಹೇಳುವ ನೀವ್ರುಗಳು ಯಾವ ರಾಜ್ಯಕ್ಕೆ ಈ ಭಾಷಣ?"

—ಗಾಜಿನ ಮನೆ ಬಳಿ ಬಂದೆವು. ಸಾಧುಗಳ ಕಾವಿ ಸೊಗಸಾಗಿ ಇಸ್ತ್ರೀ ಮಾಡಿತ್ತು. ಜರೀಪೇಟದವರೂ, ಸೂಟಿನವರೂ, ಜಾರ್ಜ ಸೀರೆಯವರೂ, ಧರ್ಮಾವರದ ಸೀರೆ—ಎಲ್ಲ ತರಹವಾರಿ ಮಂದಿ ಸೇರಿದ್ದರು.

—ಧರ್ಮ್ರಂ ರಕ್ಷತಿ ರಕ್ಷತಿ—ಯಾರೋ ಭಾಷಣ ಬಿಗಿಯುತ್ತಿದ್ದರು. "ಸಾಧು ಸಂತರ ರಕ್ಷಣೆ ಅಗತ್ಯವಿದೆ. ಸರ್ಕಾರ ಅವರಿಗೆ ಪ್ರತ್ಯೇಕ ಮಠ ಕಟ್ಟಿಸಬೇಕು. ಕಿತ್ತುಕೊಂಡಿರುವ ಜಮೀನು, ತೋಟ ಆಯಾ ಮಠಕ್ಕೆ ಹಿಂದಿರುಗಿಸಿ, ನಮ್ಮ ಪ್ರತಿನಿಧಿಗಳಾಗಿ ನಮ್ಮ ಪೈಕಿಯೇ ಒಬ್ಬರು ಮಂತ್ರಿ ಆಗಬೇಕು. ಜಂಗಮಯ್ಯಗಳೆಂದರೆ ಜರಿಯುವ ಕಾಲ ಹೋಗಬೇಕು. ತಾವು ಧರ್ಮರಾಜ್ಯ ಕಟ್ಟಬೇಕು. ಧರ್ಮ್ರಂಚರಾ, ಸತ್ಯಂವದಾ—ಎಲ್ಲಿದೆ ಧರ್ಮ? ಧರ್ಮಪ್ರಚಾರಕರಾದ ನಮಗೆ ಪ್ರೋತ್ಸಾಹವಿಲ್ಲ. ನಮ್ಮ ಮಾತು ಕೇಳುವವರಿಲ್ಲ"—ಎಂದು ಲೌಡ್‌ಸ್ಪೀಕರ್‌ನಲ್ಲಿ ಸಿಡಿಲಿನಂತೆ ಗುಡುಗಿದ ಆ ಯತಿ.

ನನ್ನ ಜೊತೆಗೆ ಬಂದ ಕಾವಿಧಾರಿ-ಹೇಳಿದ. "ಬರೇ ಮಾತು-ನಡೇರಿ ಓಟ್ಲಿಗೆ ಓಗೋವಾ"-ಎಂದು, ಅದು ಈಗ ಸತ್ಯದ ಮಾತು-ಎಂದು ಹೊರಟೆವು.

—ಮುನೀಶ್ವರ



ನಾವೇ! ನಾನೂ ಅವನೂ ಈ ಊರಿನ ಧೋಬಿಗಳು.

ರೈಲಿನಲ್ಲಿ ನಿದ್ರಾ ವೈಖರಿಗಳು

ಇತ್ತೀಚೆಗೆ ರೈಲು ಪ್ರಯಾಣಿಕರಿಗೆ ಸವಲತ್ತುಗಳ ಮೇಲೆ ಸವಲತ್ತುಗಳು ದೊರೆಯುವ ಲಕ್ಷಣಗಳು ಕಾಣಬರುತ್ತಿವೆ. ರೈಲು ಹೆಚ್ಚು ಸದ್ದು ಮಾಡದೆ ಚಲಿಸಲು ಕಾರ್ಯಕ್ರಮ ಕೈಕೊಳ್ಳುವುದಾಗಿ ಮೊನ್ನೆ ಮೊನ್ನೆ ಭರವಸೆಕೊಟ್ಟರು. ಅನಂತರ ಈಗ ರೈಲಿನಲ್ಲಿ ಸುಖನಿದ್ರೆ ಮಾಡುವ ಸೌಲಭ್ಯವನ್ನು ಕಲ್ಪಿಸುವುದಾಗಿ ಆಶ್ವಾಸನೆ ದೊರೆತಿದೆ.

ಶಯನಾನುಕೂಲತೆಗಳುಳ್ಳ ಶಕಟಗಳನ್ನು ಕ್ರಮೇಣ ಬಳಕೆಗೆ ತರುವ ಈ ಹೊಸ ಯೋಜನೆಯಿಂದ ಗಾಂಧೀಕ್ಲಾಸ್ ಪ್ರಯಾಣಿಕರಿಗೆ ಅನುಕೂಲವಾಯಿತೆಂಬುದೇನೋ ನಿಜ. ಆದರೆ ಈ ಸುಧಾರಣೆ ಸವಲತ್ತುಗಳಿಂದೆಲ್ಲ ಒಂದು ದುಷ್ಪರಿಣಾಮವಂತೂ ಇದ್ದೇ ಇದೆ. ಸುಧಾರಣೆ ಹೆಚ್ಚಿದಂತೆ ಬದುಕಿನಲ್ಲಿರುವ ವೈವಿಧ್ಯ ಮಾಯವಾಗಿ ಎಲ್ಲದರಲ್ಲೂ ಏಕಪ್ರಕಾರತೆ ಬಂದು, ಬದುಕು ಅಷ್ಟೋ ಇಷ್ಟೋ ಜಡವಾಗುತ್ತದೆ. ರೈಲುಗಳಲ್ಲಿ ಬರುವ ಈ ಶಯನ ಸೌಲಭ್ಯವೂ ಈ ದೋಷದಿಂದ ಪಕ್ಕಾಗಿಲ್ಲ.

ಇಂದು ಉಚ್ಚತರಗತಿಗಳವರಿಗೆ ಮಾತ್ರ ಸ್ವಲ್ಪ ಮಟ್ಟಿಗಿರುವ ಕೈಕಾಲು ಚಾಚಿ ಮಲಗುವ ಸೌಲಭ್ಯ ಎಲ್ಲರಿಗೂ ದೊರೆಯುವಂತಾದರೆ ಇಂದು ರೈಲಿನಲ್ಲಿ ಕಾಣಬಹುದಾದ ನಿದ್ರಾ ವೈಖರಿಗಳೆಲ್ಲ ಮಾಯವಾಗುತ್ತವೆ. ಅಷ್ಟರಮಟ್ಟಿಗೆ ರೈಲು ಪ್ರಯಾಣದ ಸ್ವಾರಸ್ಯ ಕುಂದುತ್ತದೆಂದೇ ಹೇಳಬಹುದು.

ಭರತಮುನಿ ತನ್ನ ನಾಟ್ಯಶಾಸ್ತ್ರದಲ್ಲಿ ಎಷ್ಟೆಲ್ಲ ಶರೀರ ಭಂಗಿಗಳನ್ನು ನಿರ್ದೇಶಿಸಿದ್ದಾನೆಯೋ ತಿಳಿಯದು. ಆದರೆ ರೈಲಿನ ಮೂರನೆ ತರಗತಿಯ ಡಬ್ಬಿಗಳಲ್ಲಿ ರಾತ್ರಿ (ಹಗಲು ಕೂಡ) ನಿದ್ರಿಸುವವರ ನಾನಾ ಭಂಗಿಗಳನ್ನು ಗಣನೆಗೆ ತೆಗೆದುಕೊಂಡರೆ ಅವುಗಳು ಸಂಖ್ಯೆ ಕಡಮೆಯಾಗಲಾರದೆನ್ನಬಹುದು. ಕುಳಿತುಕೊಂಡು ಒರಗಿಕೊಂಡು, ಕಾಲನ್ನು ಮುಂದಿನ ಸೀಟಿನ ಮೇಲೆ ನೀಡಿಕೊಂಡು, ಪಕ್ಕದಲ್ಲಿ ಕುಳಿತವರ ಮೇಲೆ ತಮ್ಮ ಭಾರವನ್ನು ಇಳಿಬಿಟ್ಟು, ಮಂಡಿಗಳ ನಡುವೆ ತಲೆಯನ್ನು ಸಿಕ್ಕಿಸಿಕೊಂಡು,ಸೀಟಿನಡಿಯಲ್ಲಿ ಮುದುಡಿಕೊಂಡು ಗೊರಕೆ ಹೊಡೆಯುವ ಮಹಾನುಭಾವರು ಪ್ರತಿಡಬ್ಬಿಗಳಲ್ಲಿಯೂ ಇದ್ದೇ ಇರುತ್ತಾರೆ. ರೈಲಿನವರ ಹೊಸ ಯೋಜನೆಯಿಂದ ಈ ನಿದ್ರಾವೈಖರಿಗಳನ್ನು ನೋಡುವ ಸೌಲಭ್ಯ ತಪ್ಪುವುದೋ ಎಂಬ ಭಯ ಮೂಡಿದೆ.

ಕೆಲವರಿಗೆ ರೈಲಿನಲ್ಲಿ ಕುಳಿತ ಮೇಲೆ ಅದು ಚಲಿಸತೊಡಗಿದ ಕೂಡಲೆ ತೂಕಡಿಕೆ ಪ್ರಾರಂಭವಾಗುತ್ತದೆ. ಅಂಥವರು ಕೇವಲ ಎರಡೋ ಮೂರೋ ಸ್ಟೇಷನುಗಳಷ್ಟು ದೂರ ಪ್ರಯಾಣ ಮಾಡುವಾಗಲೂ ಕೂಡ ಶ್ರಾವ್ಯವಾದ ಗೊರಕೆ ಹೊಡೆದೆ. ಹೊಡೆಯುತ್ತಾರೆ. ಆದರೆ ತಾವು ಇಳಿಯಬೇಕಾದ ಸ್ಟೇಷನು ಸಮೀಪಿಸಿದ್ದು ಯಾವ ದಿವ್ಯದೃಷ್ಟಿಯಿಂದ ಅವರಿಗೆ ತಿಳಿಯುತ್ತದೋ ದೇವರೇಬಲ್ಲ. ರೈಲು ನಿಂತಂತೆ ಗೊರಕೆಗೂ ಬ್ರೇಕ್ ಹಾಕಿ ನಿಲ್ಲಿಸಿ, ಪಿಳಿ ಪಿಳಿ ಕಣ್ಣು ಬಿಟ್ಟು, ಮೀಸೆಯುಜ್ಜಿ, ಟೋಪಿ ಸರಿಯಾಗಿಟ್ಟುಕೊಂಡು, ಆಕಳಿಕೆ ಬಿಟ್ಟು, ಛತ್ರಿ ಟವಲುಗಳನ್ನೆತ್ತಿಕೊಂಡು, ತಾರಾಡುತ್ತಾ ತೂರಾಡುತ್ತ, ಅವರಿವರ ಕಾಲುಗಳನ್ನು ತುಳಿದು ಶಾಪಗಳಿಗೆ ಕಿವಿಗೊಡದೆ ಇಳಿದುಬಿಡುತ್ತಾರೆ. ಇಂಥವರ ಗೊರಕೆಗೂ ರೈಲಿನ ಚಲನವಲನಗಳಿಗೂ ಒಂದು ರೀತಿಯ ಹೊಂದಾಣಿಕೆಯುಂಟಾಗಿರುತ್ತದೆ. ನಿತ್ಯ ಪ್ರಯಾಣದಿಂದ ಹಾಗಾಗಿರಬಹುದು. ಇಂಥವರೇ ಮುಂದೆ ರೈಲಿನಲ್ಲಿ ನಿದ್ರಾವೈಖರಿಯನ್ನು ಸ್ವಲ್ಪವಾದರೂ ಉಳಿಸುವವರು. ಅವರ ಹೊಟ್ಟೆ ತಣ್ಣಗಿರಲಿ !

ರೈಲು ಪ್ರಯಾಣ ಮಾಡುವಾಗ ಹತ್ತುಗಂಟೆಯ ಸುಮಾರಿಗೆ ಸಾಮಾನ್ಯವಾಗಿ ಎಲ್ಲರ ಕಣ್ಣುಗಳೂ ಬಾಡುತ್ತವೆ. ಅಷ್ಟು ಹೊತ್ತಿಗೆ ಫಲಾರದವರೂ, ಊಟದವರೂ, ಬುತ್ತಿಯವರೂ ತಮ್ಮ ತಮ್ಮ ಕವಳ ಹೊಡೆದಿರುತ್ತಾರೆ. ಸಾಮಾನುಗಳಿಡುವ ಹಲಗೆಯ ಮೇಲೆ ತಮ್ಮ ಹಾಸಿಗೆಯನ್ನು ಹರವಿಬಿಟ್ಟು ಯಾರಿಗೂ ಅದರ ಮೇಲೆ ಸಾಮಾನುಗಳನ್ನು ತುರುಕಲು ಬಿಡದೆ ಉದ್ದಕ್ಕೂ ದರ್ಪಕಾವಲು ನಡೆಸಿದ ಛಲದಂಕ ಮಲ್ಲರು ತಮ್ಮ ಚಪ್ಪಲಿಗಳನ್ನು ಮೊದಲು ಮೇಲಕ್ಕೇರಿಸಿ ತಾವೂ ತೂರಾಡಿಕೊಂಡು ಮೇಲಕ್ಕೇರುತ್ತಾರೆ. ಉಳಿದವರೆಲ್ಲ ಅಸಹಾಯಕರಾಗಿ ತಮ್ಮ ಕಡೆಗೆ ನೋಡುತ್ತಿರುವುದನ್ನು ಕಂಡು ಕೊಂಚ ಸಂತೋಷಪಟ್ಟು ಅನಂತರ ಹಾಯಾಗಿ ರಗ್ಗೆಳೆದುಕೊಂಡು ಗೊರಕೆ ಹೊಡೆಯುತ್ತಾರೆ. ನಡುವೆ ಎಲ್ಲಾದರೊಮ್ಮೆ ಎಚ್ಚರಗೊಂಡು "ಬೀರೂರು ಬಂತೇನ್ರೀ, ತುಮಕೂರೇನ್ರೀ" ಎಂದು ಮುಂತಾಗಿ ಕೆಳಗಿನವರನ್ನು ಕೇಳಿ ಕುತೂಹಲ ತಣಿಸಿಕೊಂಡು ಮುಸುಕೆಳೆದುಕೊಳ್ಳುತ್ತಾರೆ. ಆದರ ಈ ಅನುಕೂಲ ಪ್ರತಿ ಡಬ್ಬಿಯಲ್ಲಿ ಒಬ್ಬಿಬ್ಬರಿಗೆ ಮಾತ್ರ. ಉಳಿದವರೆಲ್ಲ ಕಣ್ಣು ಬಾಡತೊಡಗಿದ ಕೂಡಲೆ ನಿದ್ರೆಗೆ ಹೇಗೆ ಅನುವು ಮಾಡಿಕೊಳ್ಳುವುದೆಂದು ತಿಳಿಯದೆ ಅತ್ತಿತ್ತ ನೋಡುತ್ತಾರೆ. ಸೀಟಿನ ಮೇಲಿರುವ ಬ್ಯಾಗು ಬುಟ್ಟಿಗಳು ಕೆಳಗಿಳಿಯುವಂತೆ ಮಾಡಿ, ಪಕ್ಕದವರನ್ನು ಕೊಂಚ ಜರುಗಿ ಎಂದು ಪ್ರಾರ್ಥಿಸಿ ಆದಷ್ಟು ಜಾಗವನ್ನು ತಮಗೆ ದಕ್ಕಿಸಿಕೊಂಡು ಮೊತ್ತ ಮೊದಲು ಪದ್ಮಾಸನಾರೂಢನಾಗಿ ನಿದ್ರೆಪ್ರಾರಂಭಿಸುತ್ತಾರೆ. ಹಲವು ಗಂಟೆಗಳ ಕಾಲ ಅದೇ ಸ್ಥಿತಿಯಲ್ಲಿ ನಿದ್ರಿಸಬಲ್ಲ ಕೆಲವೇ ಕೆಲವು ಮಂದಿ ನಿಜವಾಗಿ ಗಂಭೀರರು.

ಆದರೆ ಹೆಚ್ಚಿನ ಮಂದಿಗೆ ನಿದ್ರೆಯ ಅಮಲು ಏರಿದಂತೆ ಗಾಂಭೀರ್ಯವೆಲ್ಲ ಹಾರಿ ಹೋಗುತ್ತದೆ. ಅವರ ವಿವಿಧ ಭಂಗಿಗಳನ್ನು ತಾಳುತ್ತಾರೆ. ವರ್ಣನಾತೀತ

ಆಸನಗಳನ್ನು ಪ್ರದರ್ಶಿಸುತ್ತಾರೆ. ಅವುಗಳನ್ನೆಲ್ಲ ನೋಡಿಯೇ ತಿಳಿಯಬೇಕು.

ಕಾಲನ್ನು ಮುಂದಿನ ಸೀಟಿನ ಮೇಲೆ ಚಾಚಿ, ತಲೆ ಬುರುಡೆಯನ್ನು ಹಿಂದಕ್ಕೆ ಬಾಗಿಸಿ ಬಾಯಿ ಕಳೆದುಕೊಂಡೇ ಗೊರಕೆ ಹೊಡೆಯುವುದರಿಂದ ತೊಡಗಿ ಕೇವಲ ಎರಡು ಚದರಡಿ ಜಾಗದಲ್ಲಿ ಐದಡಿ ದೇಹವನ್ನು ಭಾಗಿಸಿ ಮುದುಡಿಸಿ ನಿದ್ರಿಸುವುದರ ವರೆಗಿನ ಹತ್ತು ಹಲವು ದೃಶ್ಯಗಳು ಇದ್ದೆ ಇರುತ್ತವೆ. 'ಎಲ್ಲೋ ಒಬ್ಬಿಬ್ಬರು ವಾಚಾಳಿಗಳು ಮಾತ್ರ ನಡುರಾತ್ರಿ ಕಳೆದರೂ ಉಳಿದವರ ಗೊರಕೆಯ ಸದ್ದನ್ನೂ ರೈಲಿನ ಸದ್ದನ್ನೂ ಮೀರುಸುವಂತೆ ಹರಟುತ್ತಿರುತ್ತಾರೆ. ಆದರೆ ಅಂಥವರೂ ಕೂಡ ಬಹಳ ಹೊತ್ತು ನಿದ್ರೆಯ ಹಿಡಿತದಿಂದ ತಪ್ಪಿಸಿಕೊಳ್ಳುವುದಿಲ್ಲ ತಾಸೆರಡು ಕಳೆಯುವುದರೊಳಗೆ ಅವರು ಕೂಡ ನಿದ್ರೆಯ ತೆಕ್ಕೆಯಲ್ಲಿರುತ್ತಾರೆ.

ಬೆಳಗಿನ ಜಾವ ಎರಡರಿಂದ ನಾಲ್ಕರವರೆಗಿನ ಅವಧಿಯಲ್ಲಿ ಎಚ್ಚರವಿದ್ದು ರೈಲು ಗಾಡಿಯಲ್ಲಿ ಪಿಳ ಪಿಳನೆ ಕಣ್ಣುಬಿಟ್ಟು ಯಾರಾದರೂ ಕುಳಿತಿರಬೇಕಿದ್ದರೆ ಆತನ ಮಾನಸಿಕ ಪರಿಸ್ಥಿತಿ ಅಸಾಧಾರಣವಾದ ಯಾವುದಾದರೊಂದು ತುಮುಲಕ್ಕೊಳಪಟ್ಟಿದೆಯೆಂದು ಹೇಳಬೇಕು. ಹಾಗಿಲ್ಲದಿದ್ದರೆ ಎಂಥವರಾದವರೂ ಸರಿಯೆ ಕಂಡಲ್ಲಿ ಸಿಕ್ಕಲ್ಲಿ ಶವಗಳೋಪಾದಿಯಲ್ಲಿ ಒರಗಿರುತ್ತಾರೆ. ಕೂರಲು ಜಾಗವಿಲ್ಲದಿರುವಷ್ಟು ಕಿಕ್ಕಿರಿತವಿದ್ದಾದರೆ ಕುದುರೆಗಳಂತೆ ನಿಂತಾದರೂ ತೂಕಡಿಸುತ್ತಾರೆ ಜನ. ಆ ಹೊತ್ತಿಗೆ ಸ್ಥಾನ ಮಾನ, ನೀಚ ಉಚ್ಚ, ಅಸಹ್ಯ ಎಲ್ಲವನ್ನೂ ಮರೆಯುವವರೇ ಬಹಳ ಮಂದಿ. ರೈಲುಗಾಡಿ ಸಮತೆಯ ರಾಜಧಾನಿ. ಆ ಹೊತ್ತಿಗಂತೂ ಸಮತೆ ಅಲ್ಲಿ ಪರಿಪೂರ್ಣ. ಭೇಧಭಾವಗಳೆಲ್ಲ ಹೋಗಿ ಆಗ ಎಲ್ಲರೂ ನಿದ್ರೆಯಲ್ಲಿ ಕರಗಿರುತ್ತಾರೆ. ಅವರಲ್ಲಿ ವ್ಯತ್ಯಾಸವಿರುವುದಾದರೆ ದೇಹಭಂಗಿಯಲ್ಲಿ ಮಾತ್ರ.

ಆದರೆ ಶಯನಾನುಕೂಲತೆ ದೊರೆತರೆ ಎಲ್ಲರೂ ಆಸ್ಪತ್ರೆಯ ರೋಗಿಗಳಂತೆ ಮಲಗಿಬಿಡುತ್ತಾರಲ್ಲ ಎಂಬುದೇ ಚಿಂತೆ. ಆ ಸೌಲಭ್ಯ ಸಾರ್ವತ್ರಿಕವಾಗಿ ದೊರೆಯಲು ಇನ್ನೂ ಕೆಲವು ಪಂಚವಾರ್ಷಿಕ ಯೋಜನೆಗಳು ಕಳೆಯಬೇಕಾದೀತೆಂಬುದೇ ಒಂದು ಸಮಾಧಾನ.

ರಾಮಿ

—

ಕೃಪಾಂಕ

[ಕಾಲೇಜಿನ ಆವರಣದಲ್ಲಿ ಕೃಪಾಂಕ (ದಯಾಂಕ)ದ ಬಗ್ಗೆ ನಡೆದ ಚರ್ಚೆಯ
ನಿರೂಪಣೆ ಕೃಪ Grace=ಅಂಕ=Marks]

A—ಕೃಪಾಂಕ ಕೊಡಬಾರದೆಂತ...... .ನಿರ್ಣಯವಂತೆ,

B—ನಿಜವ ?

A—ಹೌದಂತೆ

C—ಯಾರು ಹೇಳಿದವರು
ಅರೆ ಹುಚ್ಚ ಬಚ್ಚಗಳು.

D—ಮೊನ್ನೆ ತಾನೆ........
ಮಂತ್ರಿಗಳೇ ಬಿಗಿದಿದ್ದರು
ಭಾಷಣಮಾಲೆ ಯದ್ವಾತದ್ವಾ

E—ಹೌದದು—ಅಗ್ರಲೇಖನ ಉದ್ದುದ್ದ. ಸಂಪಾದಕರೂ ಗೀಚಿದ್ದರೂ

C—[ರೇಗಿ] ಅರೆ ಹುಚ್ಚ ಬಚ್ಚಗಳು ಯಾರು ಹೇಳಿದವರು.

E—' ದಯೆ 'ಯೆಂಬ ಎರಡು ನುಡಿ
ಗೈರು, ಹಾಜರಿಯಂತೆ ಅವರೆದೆಯ—
ಎಲುಬು ಗೂಡಿನಲ್ಲಿ

C—[ಮತ್ತೂ ರೇಗಿ] ಮಾನವ ಪ್ರಾಣಿಗಳು
ಮರ್ಕಟಾನುಯಾಯಿಗಳು
.......ನಾಯಿಗಳು

A—ಕೃತಘ್ನರು !
ವಿಶ್ವಾಸಘಾತುಕರು
ಮಾಡಿದುಪಕಾರಕ್ಕೆ ಕಾರವೆಸಗುವರು.

B—ನಮ್ಮ ' ದಯೆ ' ಇಲ್ಲದೆಯೇ
ಮಂತ್ರಿಗಳಾದರೆ ? ಅವರು.

A—" ಕಾರ್ಯವಾಸಿ ಕತ್ತೆ........"

C—[ಇನ್ನೂ ರೇಗಿ] " ' ದಯ 'ವಿಲ್ಲದ ಧರ್ಮ ಆವುದಯ್ಯಾ
' ದಯ 'ವೇ ಬೇಕು ಸಕಲ ಪ್ರಾಣಿಗಳಲ್ಲಿ "
ಬುದ್ಧ ಬಸವಾದಿ ಪ್ರಮಥರ ನುಡಿಗೆ
ಬೆಲೆ ಕೊಡದ ಶುದ್ಧ ಮುಖರು.

A—(ಸಹನೆಯಿಂದ) 'ದಯ'ವ ತೋರದಿದ್ದರೆ ನಮ್ಮ ಬಾಳು-ಬಾಳೆ?
B— ಇಲ್ಲ ಇಲ್ಲ ಬರೀ ಗೋಳು.

C—ನಮಗೇನು-
ಹೂಡುವೆವು-ಮತ್ತೆ ಸ್ಟ್ರೈಕು ಕಾಲೇಜು ಕಿಟಕಿ ಬಾಗಿಲುಗಳೆಲ್ಲ
ಮತ್ತೊಮ್ಮೆ ಹೊಸಗಾಜು ಕಾಣಬೇಕು.
(ಸ್ವಗತ) ಕೃಪಾಂಕ ಕೊಡಬಾರದೆಂತ........ನಿರ್ಣಯವಂತೆ
[ತುಟಿ ಕಚ್ಚಿ ರೇಗಿ] ಮಾನವ ಪ್ರಾಣಿಗಳು
ಮರ್ಕಟಾನುಯಾಯಿಗಳು
........ನಾಯಿಗಳು.
B—ಆಗಲಿ ಇನ್ನೊಮ್ಮೆ
ನಡೆಯಲಿ ಟೊಳ್ಳು-ಗಟ್ಟಿಯ ಪರೀಕ್ಷೆ.
ಗೆಲವು ಯಾರಿಗೆ?
ಮಾಡಿ ನೋಡಲಿ-ನಿರೀಕ್ಷೆ
C—ಮಾಡುವರಂತೆ ಕೃಪಾಂಕ-ರದ್ದು!
ನಡೆಯಲಿ ಇನ್ನೊಮ್ಮೆ ಕುರುಕ್ಷೇತ್ರ ಯುದ್ಧ
ಯಾಕೋ ಕಾಣೆ-ನಮ್ಮ ಮೇಲೆ ಇವರಿಗೆ ಜಿದ್ದು-
[ಕಾಲೇಜಿನ ಗಂಟೆ ಬಾರಿಸುವುದು ಎಲ್ಲರೂ ಚದುರುವರು].

—ಯಚ್ಚೆಂಪಿ



ಆಫೀಸರ ಮೇಲೆ ಚಾಡಿ ಹೇಳುಕ್ಕೆ ವಿಧಾನಸೌಧಕ್ಕೆ ಹೊರಟ—ಜವಾನ.

ಹೋಳಿ-ಹುಣ್ಣಿಮೆ ದಿನ

"ನಮ್ಮೂರ ಹತ್ತಿರವೇ ರುಷಿಗಳು ಇರುವುದು ಎಲ್ಲಾದರೂ ಸಾಧ್ಯವೇನೋ? ರುಷಿಗಳು ಎಂದರೆ ಎಲ್ಲೋ ಅರಣ್ಯದಲ್ಲಿ, ಎಲ್ಲೋ ಬೆಟ್ಟದಲ್ಲಿ, ಯಾವುದೋ ಗುಹೆಗಳಲ್ಲಿ, ಆಲು ಅಣ್ಣು ಬೆಲ್ಲಗಳನ್ನು ತಿಂದುಕೊಂಡು ಜೀವಿಸುತ್ತಾರೆ. ಅಲ್ಲದೆ, ಅವರು ಅದೃಶ್ಯರಾಗಿರುತ್ತಾರೆ. ಅದ ಬಿಟ್ಟು, ನಮ್ಮೂರ ಹತ್ತಿರವೇ ರುಷಿಗಳಿದ್ದಾರೆ ಎಂದರೆ ನಂಬಲು ಹೇಗೆ ಸಾಧ್ಯ? ನಮ್ಮೂರಿನ ಒಳಗೂ ಬಂದು ಓಡಾಡುತ್ತಾರೆ ಎಂದರೆ ಹೇಗೆ ನಂಬುವುದು?" ಎಂದ ಪಾಪಣ್ಣ.

"ಅಲ್ಲದೆ, ತನ್ನ ಪರಿಚಯ ಯಾರಿಗೂ ಸಿಗದಂತೆ ಓಡಾಡಲು ಬೀಡಿಯನ್ನೇ ಸೇದಿಕೊಂಡು ಬರಬೇಕೇ? ಬೀಡಿಗಾಗಿ ಕಾಸುಕೂಡ ಕೇಳಬೇಕೇ? ಕಾಸು ಕೊಡ ದಿದ್ದರೆ ಮಂಕುಬೂದಿಯನ್ನು ಎರಚಲೇಬೇಕೇ? 'ಮತ್ತು'-ಬರಿಸುವ ಪೇಡಾವನ್ನೇ ತಿನ್ನಲು ಕೊಡಬೇಕೇ?

"ಏನೋಪ್ಪ, ಯಾರು ರುಷಿಗಳೋ ಹೇಗೆ ಹೇಳುವುದು? ಕೆಲವರ ಕಣ್ಣು ಗಳಂತೂ ತೀವ್ರವಾಗಿರುತ್ತವೆ. ಏನು ಮಾಯಾಮಂತ್ರ ಮಾಡಿ ಬಂದಿರುತ್ತಾರೋ ತೇಲುಗುಡ್ಡು-ಮೇಲುಗುಡ್ಡು ಮಾಡಿಕೊಂಡು ನೋಡಿದರೆ ಅಂಜಿಕೆಯಾಗುತ್ತೆ. ಆಳ ದಿಂದ ಬರುವ ಅವರ ಧ್ವನಿ ಕೇಳಿದರೆ ನಡುಕ ಬರುತ್ತೆ" ಎಂದು: ರಂಗಣ್ಣನಿಗೆ.

ರಂಗಣ್ಣ ಇದ್ದಕ್ಕಿದ್ದಂತೆ ರೂಪ ಬದಲಾಯಿಸಿ ಪ್ರಜ್ವಲಿಸುವ ಸನ್ಯಾಸಿಯಂತೆ ಕಂಡ. ಸೊಗಸಾದ ಕಾವಿಬಟ್ಟೆ, ದೀರ್ಘವಾದ ಬಿಳಿಗಡ್ಡ, ರುದ್ರಾಕ್ಷಿ ಮಾಲಾ, ವೀಭೂತಿ ಪಟ್ಟೆಗಳು, ಕೈಯಲ್ಲಿ ಒಂದು ದೂದ್‌ಪೇಡಾ! ಧ್ವನಿಮಾತ್ರ ರಂಗಣ್ಣನದು!

ಪಾಪಣ್ಣನಿಗೆ ಬೆವರು ಕಿತ್ತುಕೊಂಡಿತ್ತು.

"ಬೆದರಬೇಡ ಪಾಪಣ್ಣ. ಕೊಂಚವೇ ಕೊಂಚ ಭಂಗ್ ಹಾಕಿದ್ದೇನೆ ಬಾದಾಮಿ ಹಾಲಿನಲ್ಲಿ. ಒಂದರ್ಧ ಗಂಟೆಯೊಳಗೆ ಸರಿಹೋಗುತ್ತೀಯೇ!" ಎಂದಂದ ರಂಗಣ್ಣ.

—ಹೊಸು

"ಓಹೋ....ಸರಿ....ಸರಿ...."

"ಲೋ! ಗೋವಿಂದಾ....ಬಾರೋ ಇಲ್ಲಿ"

"ಬಂದೇ ಸ್ವಾಮಿ"

"ಸೀಟು ಖಾಲೀ ಇಲ್ದೆ, ಅಲ್ಲಿಬ್ರು ಬಕ್ರಾಗ್ಳು, ಟೇಬಲ್ ಮಗ್ಗಲ್ಲೇ ಕಾಲು ನೋಯ್ಸಿಕೊಂಡು ನಿಂತಿರೊಂದು ನಿಂಗೆ ಕಾಣೊಲ್ವೇನೊ?"

"ಹ್ಞಿ....ಹ್ಞಿ....ಕಾಣ್ಸತ್ತೆ ಸ್ವಾಮಿ"

"ಹಿಹ್ಞಿ ಅಂತೆ ಹಿಹ್ಞಿ....ಹೋಗಿ ಅವ್ರನ ಪುಸಲಾಯ್ಸಿ, ಆ ಬಚ್ಚಲ್ಮನೆ ಮಗ್ಲ ವರಾಂಡದಲ್ಲಿ ಕುರ್ಚಿ ಹಾಕಿ ಕೊಡ್ಸಿ, ಅದೇನು ಬೇಕೊ ಬಸ್ಡು ಕೊಡು"

"ಹಾಗೇ ಆಗ್ಲಿ ಸ್ವಾಮಿ"

"ಲೇ ಗೋವಿಂದಾ...."

"ಸ್ವಾಮಿ?"

"ಅಂದ್ಹಾಗೆ ಏನೇನು ತೊಗೊಂಡ್ರೊ ಅವ್ರು?"

"ಒನ್ ಬೈ ಟೂ, ಒಡೆ, ಒಂದ್ ಬೈಟು ಕಾಫಿ"

"ಅವ್ರ ತಲೆ ಒಡೆ ಹೋಗಿ!....ಆ....ಬಲಗಡೆ ಹತ್ತು ಟೇಬಲ್‌ಗೆ ಯಾರು ಸಪ್ಲೈ ಮಾಡ್ತಿರೋದು?"

"ನಾರಾಯಣ ಸ್ವಾಮಿ"

"ಓಹ್ಹೋ........ಸರಿ....ಸರಿ........ನೀನೂ ಹಾಗೇ ಸ್ವಲ್ಪ ಸಹಾಯ ಮಾಡು ಆತನಿಗೆ. ಅಡಗೇ ಮನೇಲೆ ಅದೇನು ಮಾಡ್ತೀ!"

"ನಾವಿಬ್ರೂ ಸೇರ್ಕೊಂಡು ಆಗ್ಲೇ ಎಲ್ಲಾ ಮುಗಿಸಿಬಿಟ್ವಿ ಸ್ವಾಮಿ. ಈಗ ಆ ಬಲಗಡೆ ಗಲಾಟೆ ಇಲ್ಲಾ."

"ಸರಿ ಹಾಗಾದ್ರೆ....ಒಂದ್‌ಬೈಟೂ ನೀರೇನಾದ್ರೂನೂ ಬೇಕೋ ಆ ಬಕ್ರಾಗಳಿಗೆ ಕೇಳು"

"ಏ ನಾರಾಯ್ಣ?"

"ಬಂದೇ ಸಾರ್"

"ಹ್ಯಾಗಿದೇ ನಿನ್ನ ಕಡೆ ಸಪ್ಲೈ"

“ ತುಂಬಾ ರಶ್ಶು ಸಾರ್....ಏನೇನ್ಕೊಟ್ವೇಂತ ನೆನಪಿಟ್ಟುಕೊಳ್ಳೋದೇ ಕಷ್ಟ”

“ ಅರೆ ! ಗೋವಿಂದ ಹೇಳದ್ನಲ್ಲಯ್ಯ ನಂಗೆ, ನೀವಿಬ್ರೂ ಸೇರಿಕೊಂಡು ಎಲ್ಲಾ ಮುಗಿಸಿದ್ರೀಂತ !”

“ ಅವ್ನೆಲ್ಲಿ ಬರ್ತಾನೆ ಸಾರ್....ಭಟ್ರು ಚಟ್ನಿ ರುಬ್ಬೋಂದ್ರಂತೆ ಆ ಕಡೆ ಹೋದ.” ಏನ್‌ಪರ್ವಾಗಿಲ್ಲಾ ಸಾರ್ .. ನಾನೇ ಎಲ್ಲಾ ಮುಗಿಸಿಬಿಟ್ಟೆ !”

“ಓ ಹೊ....ಸರಿ....ಹಾಗಾದ್ರೆ....ಅಂದ್ಹಾಗೆ ಎಷ್ಟು ಕಲೆಕ್ಷನ್ ಆಯ್ತು ನಿನ್ಕಡೆ?”

“ ಹೆಚ್ಚಿಲ್ಲಾ ಸಾರ್....ಒಂದೈವತ್ತು ರೂಪಾಯಿ ಆಗಿರಬಹುದು ”

“ ಅರೆ, ಅಷ್ಟೊಂದು ಗಲಾಟೆ ಇತ್ತಲ್ಲಯ್ಯಾ ! ಬಿಲ್ಲುಗಿಲ್ಲು ಸರಿಯಾಗಿ ಬರ್ದೀ ತಾನೆ ?”

“ ಅದೆಲ್ಲಾ ಸರಿಯಾಗಿದೇ ಸಾರ್. ಆರ್ಡರೇ ಕಮ್ಮಿ. ನೋಡೋಕ್ಕೆ ಎಲ್ರೂ ಜಂಟ್ಲ್‌ಮನ್‌ಗಳೇ. ತೊಗೊಳ್ಳೋದು ಮಾತ್ರ ಒನ್ ಬೈ ಟೂ, ಫೋರ್....!”

“ ಸರಿ....ಸರಿ....ನೀನು ಹೋಗು—ಭಟ್ರೆ ?”

“ ಬಂದೇ........”

“ ಹಿಟ್ಟು ಏನಾದ್ರೂ ಮಿಕ್ಕಿದ್ರೂ ಹಾಗೇ........”

“ ತುಂಬಾ ಇದೆ ಸ್ವಾಮಿ........ಮೊನ್ನೇ ದಿನದ ಹಿಟ್ನಲ್ಲೇ ಇವತ್ತೂ ದೋಸೇ ಹುಯ್ತಾ ಇದ್ದೀನಿ, ನಾಳೆಗೂ ಅದೇ ಆಗುತ್ತೆ !”

“ ಓ ಹೋ....ಸರಿ ಸರಿ....ಗೋವಿಂದ ಚಟ್ನಿ ರುಬ್ಬಕೊಟ್ನೆ ?”

“ ಅಯ್ಯೋ ಅವ್ನೆಲ್ಲಿ ಮಾಡ್ತಾನೆ ! ನಾರಾಯಣನ ಕಡೆ ತುಂಬಾ ರಶ್ಶು ನಾನೂ ಹೋಗ್ತೀನೀಂತ ಹೋದ ಆ ಕಡೆಗೆ....ನಾನೇ ರುಬ್ದೆ... ಆ . ಆ . ಕ್ಷಿ...ಅಕ್ಷಿ: ಹಾಳು ಮೆಣಸಿನಕಾಯಿ ಖಾಟು....” ಸ್ವಾಮಿ....,

“ ಏನು ಭಟ್ರೆ ?”

“ ಒಂದು ವಾರದ ಕೆಳಗೆ ಮಾಡಿದ ಸ್ವೀಟುಗಳೆಲ್ಲಾ ಇನ್ನೂ ಹಾಗೇ ಇವೆ. ವಾಸನೇ ಬರೋಕ್ಕೆ ಶುರುವಾಗಿದೆ....”

“ ಅಯ್ಯಯ್ಯೋ....ಹಾಗೇ ಇರ್ಲಿ ಅವು....ನಿತ್ಯಾ ಬಿಸಿ ಮಾಡಿಡಿ, ಇನ್ನೂ ಒಂದು ತಿಂಗ್ಳು... ನಾನಿವತ್ತೇ ಒಂದು ಜಾಹಿರಾತು ಕೊಡ್ತೀನಿ....ಹೊಸ್ ಸಿಹಿ ತಿಂಡಿಗಳೂಂತ....

“ ಸರಿ ಸ್ವಾಮಿ .. ಬರ್ತೀನಿ. ನಾರಾಯ್ಣ ಆಗ್ಲೇ ಎರ್ಡು ಮಸಾಲೇಂತ ಕೂಗ್ತಿದ್ದಾನೆ ”

"ಗೋವಿಂದಾ !....ಏ ಗೋವಿಂದಾ ! !....ಲೋ ಕತ್ತೀ ?"

" ಬಂದೇ ಸ್ವಾಮಿ...."

" ಏನು ಮಾಡ್ತಿದ್ಯೋ ?"

" ಭಟ್ರು ಚಟ್ನಿರುಬ್ಬೋಂದ್ರು. ಆ ಕಡೆ ನಾರಾಯಣನಿಗೂ ತುಂಬಾ ಕೆಲ್ಸ ಇತ್ತು. ನಾನೆರ್ಡೂ ಕಡೆಯೂ ನೋಡ್ಕೊತಿದ್ದೆ! ಎರಡೆರಡು ಕಡೆ ನೋಡಿಕೊಳ್ಳೋದು ತುಂಬಾ ಕಷ್ಟ ಸ್ವಾಮಿ ..."

" ಓಹೋಃ ಕಷ್ಟ ಅಲ್ವೆ... ನಿನ್ನ ಕೈಲಾಗೊಲ್ಲ ಅಲ್ವೆ? ಭಟ್ರು ನಾರಾಯ ಇಬ್ರೂ ಹೇಳಿದ್ರು ನಂಗೆ, ನೀನು ಇಬ್ರಿಗೂ ಕೈಕೊಟ್ಟೇಂತ"

"ಆಂ....ಂ !"

"ಹೂಂ....! ಇಗೋ ಹಿಂತಿರಗು....ಎದುರಿಗೇನು ಕಾಣುತ್ತೀ ಹೇಳು !"

"ಬಾಗಿಲು ಸ್ವಾಮಿ....ತೆಗೆದಿದೆ"

"ಸರಿ....ಸರಿ....ನೀನು ಹಿಡಸ್ತೀ ಅಲ್ವೆ ಅದ್ರಲ್ಲಿ ?"

"ಹು ...ಹುಂಂ"

"ಸರಿ....ನೇರವಾಗಿ ಆ ಬಾಗಿಲ ಮೂಲಕ ಹೊರಕ್ಕೆ ಹೊರ್ಡು....ಮತ್ತೆ ಈ ಹೋಟಲಿಗೆ ಕಾಲಿಡಬೇಡ. ಅಂ....ಸ್ವಲ್ಪ ತಡಿ. ಆ ಎರ್ಡು ಬಕ್ರಗಳ ಬಿಲ್ಲೆಷ್ಟಾಯ್ತು?

"ಹಿ....ಹಿ....ನಾಕಾಣೆ. ಅದ್ನೂ ಕೊಡ್ದೆ ಮಾತಾಡ್ತಾ ಆಡ್ತಾ ಹೊರಟು ಹೋದ್ರು"

"ಕತ್ತೆ....ನಿಂಗೆ ಜ್ಞಾನಗೀನ ಇದ್ಯೋ ಇಲ್ವೋ ಹ್ಯಾಗೆ... ಹೊರಡೋಕ್ಕೆ ಮುಂಚೆ ಅಡಗೇ ಮನೇಲಿ ನಾಲ್ಕು ದಿನದ ಮುಸರೆ ಬಿದ್ದಿದೆ, ಅದ್ನ ತಿಕ್ಕಿ ಹೋಗು.... ಬಡವ !"

"ಸ್ವಾಮಿ"

"ಏನೋ ಅದು ಮತ್ತೆ ನಿನ್ನ ಗೋಳು"

"ತಾವು ಹೇಳಿದ ಆ ಭಕ್ರಗಳು ಮಾತಿನ ಭರದಲ್ಲಿ ದುಡ್ಡು ಕೊಡೋದು ಮರತಿದ್ದಲ್ದೆ ಹಿಪ್ಪಾಕೆಟ್‌ನಿಂದ ಜಾರಿಬಿದ್ದ ಮನಿಪರ್ಸ ವಾಪಸ್ ತೊಗೊಂಡು ಹೋಗೊದೂ ಮರೆತುಬಿಟ್ಟಿದಾರೆ. ಹಿ ಹಿ—ನಾನು ತೆಗೆದು ನೋಡಿದೆ ...ಒಳಗೆ ಹತ್ತು ರೂಪಾಯಿನ ನೋಟಿತ್ತು." '

"ಓ ಹೊ ಹೊ ಭೇಷ್ ಇಲ್ಲಿ ಕೊಡು... ಬಹ್ಳ ಬುದ್ಧಿ ನಿಂಗೆ ಆದ್ರೆ ಹುಷಾರ್ ಮತ್ತೆ ಅವ್ರು ಬಂದು ಪರ್ಸ್ ಕೇಳಿದ್ರೆ ನಂಗೊತ್ತಿಲ್ಲಾನ್ನು....ಹಿಹಿ—ನೀಜಾಣಮರಿ —ಹೋಗು—ಬೀದಿ ಬಾಗಿಲು ಭದ್ರವಾಗಿ ಹಾಕಿ ಅಡಗೆ ಮನೇಲಿ ಇರೊ ಒಂದೇ ಒಂದು ಮಸಾಲೊಡೆ ತಿನ್ನು.. !"

—**ಹ. ಸು.**

ಕನ್ನಡ ಮಾತಿಗೆ ಭಯವಾಗಲಿ

ಯಾರೂ ಆಶ್ಚರ್ಯಪಡದೆಯೆ ಕ್ಷಮಿಸಬೇಕು. ಕನ್ನಡಿಗರೆಲ್ಲ ಒಂದಾಗಿ ವಿಶಾಲ ಮೈಸೂರ್ನಾಟಕ ರಚಿಸಿದ ವಾತಾವರಣದಲ್ಲಿ ಇದೇನೊ 'ಕನ್ನಡ ಮಾತಿಗೆ ಜಯವಾಗಲಿ' ಎಂಬುದರ ಅಚ್ಚಿನ ತಪ್ಪು ಎಂದು ದಯವಿಟ್ಟು ತಿಳಿಯಬಾರದು. ನಾನು ಹೇಳುವ ವಿಷಯ 'ಕನ್ನಡ ಮಾತಿಗೆ ಭಯವಾಗಲಿ' ಎಂಬುದೆ ಸರಿ. ಇದರಲ್ಲಿ ತಪ್ಪು ಏನಾದರೂ ಇದ್ದರೆ ಅದು ನನ್ನದು, ಅಚ್ಚಿದನಲ್ಲ.

ನಿಜ, ಸ್ವಾಮೀ, ತಪ್ಪು ನನ್ನದೇ. ಕನ್ನಡದ ಹೊರತು ಇನ್ನೊಂದು ಮಾತನ್ನು ಅರಿಯದ ನನ್ನಂತಹ ಮುಕ್ಕ ಇದೇ ಮೊದಲ ಸಲ ಬೆಂಗಳೂರಿಗೆ ಬಂದದ್ದು. ಕನ್ನಡರಾಜ್ಯದ ಪ್ರಜಾಧಾನಿಯಲ್ಲವೆ ಬೆಂಗಳೂರು? ಸರಿ, ನಗರವೂ ದೊಡ್ಡದು. 'ಎಲ್ಲಿ ನೋಡಿದರಲ್ಲಿ ಕನ್ನಡದ ಸೊಲ್ಲು' ಎಂದು ಕಟ್ಟಿದ ಹಲ್ಗಳಿಂದ ಉಸಿರೆಳೆದು ಹಿರಿಯರು ಹೇಳಿದ್ದನ್ನು ಕೇಳಿ ಅಭಿಮಾನದಿಂದ ಬಂದೆ, ಗಾಡಿಯಿಂದ–ಅಲ್ಲ–ಟ್ರೈನಿನಿಂದ ಇಳಿದೆ. 'ಹೋಟ್ಲು, ಸಾರ್' ಎಂದ ಯಾವನೊ ಒಬ್ಬ! ಪಕ್ಕಕ್ಕೆ ಸರಿದೆ, ಮತ್ತೆ 'ಸಾರ್' ಎಂದ, ಇನ್ನೂ ಸರಿದೆ, "ಹೋಟ್ಲು, ಹೋಟ್ಲು" ಎಂದ. ಹೊಟ್ಟೆಗೆ ಕೈ ಇಟ್ಟುಕೊಂಡೆ ನೋಡಿದೆ, ಉಟ್ಟ ದೋತರ ಸರಿದಿಲ್ಲ. ಮತ್ತೆ ಇವನೇಕೆ "ಹೋಟ್ಲು ಸಾರ್" ಎನ್ನುವ ಎಂದು ದಿಗ್ಭ್ರಮೆಗೊಂಡು ಹೊರಗೆ ನಡೆದು ಬಂದೆ. ಅರಿಯದ ನನಗೆ ಯಾವ ತೊಂದರೆಯೂ ಬೇಡ ಎಂದು ಕಾಲ್ನಡಿಗೆಯಿಂದ ಹೊರಟೆ; ದಾರಿಯನ್ನು ಕೇಳಿದೆ, "ಸ್ಟ್ರೈಟ್ ಹೋಗಿ" ಎಂದ! "ಸ್ಟ್ರೈಟ್ ಅಲ್ಲಯ್ಯಾ, ದಾರಿ, ದಾರಿ" ಎಂದೆ. ಅವನಿಗೆ ಕನ್ನಡವೆ ತಿಳಿಯಲಿಲ್ಲವೇನೊ!

ಅಂತೂ ಹಾಗೇ ನಡೆದೆ. ಎಲ್ಲಿಯಾದರೂ ಊಟಮಾಡೋಣ ಎನ್ನಿಸಿತು. ಕೇಳಿದೆ. ಅಲ್ಲಿಯೆ ಎದುರು ಒಂದು ಕಟ್ಟಡವನ್ನು ತೋರಿಸಿದರು. ಅಲ್ಲಿ ಊಟ ದೊರಕಬಹುದು ಎಂದು ನಡೆದು ಬಾಗಿಲಿಗೆ ಬಂದು ನೋಡುತ್ತೇನೆ, ದೊಡ್ಡ ಅಕ್ಷರಗಳಲ್ಲಿ ಬರೆದಿದ್ದಾರೆ "ಲಂಚ ಹೋಂ" ಎಂದು! ಎಲಎಲ! ದೊಡ್ಡ ನಗರಗಳಲ್ಲಿ ಊಟದ ಬದಲು ಲಂಚವನ್ನು ತಿಂದು ಜೀವನ ನಡೆಸುವರೆ ಎಂದು ಬೆರಗಾಗಿ ನಿಂತೆ. ಅಷ್ಟರಲ್ಲಿ ಒಳಗಿನಿಂದ ಒಬ್ಬ ಬಂದ, ಅವನನ್ನು ಕೇಳಿದೆ, ಅವನು ಹೇಳಿದ, "ಮೀಲ್ಸ್ ರೆಡಿ" ಎಂದ. ಅಂದರೆ? ಲಂಚದ ಹೋಮ ಎನ್ನುವುದಕ್ಕೆ ಇಂಗ್ಲಿಶದಲ್ಲಿ "ಮೀಲ್ಸ್ ರೆಡಿ" ಎನ್ನುತ್ತಾರೇನೊ ಎಂದುಕೊಂಡು, ಹಾಗೇ ನಡೆದು, ಉಡುಪಿಯ

ಕೃಷ್ಣನ ಮೂರ್ತಿಯ ಸಾಕ್ಷಾತ್ಕಾರವಾದ ಇನ್ನೊಂದೆಡೆ ಹೋಗಿ ಕಾಫೀ-ದೋಸೆ ತಿಂದು ಹೊರಬಿದ್ದೆ.

ಹಾಗೆಯೆ ಎಷ್ಟೊತ್ತು ಕಳೆದೆನೊ! ಕೊನೆಗೆ ನಡೆಯುತ್ತಲೆ ನಗರದ ಇನ್ನೊಂದು ಭಾಗಕ್ಕೆ ಬಂದೆ. ಬಟ್ಟೆಯ ಅಂಗಡಿಗಳು. ಒಳ್ಳೆಯ ಬಟ್ಟೆಯನ್ನಾದರೂ ಕೊಳ್ಳೋಣ ಎಂದು ನೋಡುತ್ತ ನಡೆದೆ. ಆದರೆ ಇವು ಮಾರಾಟದ ಅಂಗಡಿಗಳಲ್ಲವೇನೊ! ಒಂದೆಡೆ "ಸಿಲ್ಕ್ ಹೌಸ್" ಎಂದು ಬರೆದಿದ್ದಾರೆ; ಇನ್ನೊಂದೆಡೆ "ಕ್ಲಾತ್ ಹಾಲ್" ಎಂದಿದ್ದಾರೆ. ಈ ಹೌಸು-ಹಾಲುಗಳ ಅರ್ಥವೆ ನನಗಾಗಲಿಲ್ಲ. ಮುಂದೆ ನೋಡೋಣ-ಎಂದುಕೊಂಡೆ. ಮುಂದೆ ನೋಡಿಯೂ ನೋಡಿದೆ "ಎಂಪೋರಿಯಂ" ಎಂದು ಬರೆದಿದ್ದರು. ಇದೇನೊ ತಮಿಳ ಶಬ್ದವಾಗಿರಬಹುದು ಎಂದು ಹಾಗೆಯೆ ಹೊರಟೆ; ಹಾಂ! ಇಲ್ಲಿ ದೊರಕಬಹುದೇನೊ ಎಂದುಕೊಂಡೆ, ಯಾಕೆಂದರೆ, 'ಕ್ಲಾತ್ ಮಾರ್ಟ್' ಅಂತ ಬರೆದಿದ್ದರು. 'ಮಾರ್ಟ್' ಎಂದರೆ 'ಮಾರಾಟ' ಶಬ್ದದ ಮೈಸೂರ ಉಚ್ಚಾರಣೆಯಾಗಿದ್ದರೂ ಇರಬಹುದು ಎಂದು, ಧೈರ್ಯವನ್ನು ತಂದುಕೊಂಡೆ. ಆದರೆ "ಕ್ಲಾತ್" ಎಂದರೇನು? ಉಹುಂ-ಇಲ್ಲಿಯೂ ಬೇಡ ಎಂದು ಸಾಗಿದೆ ಮುಂದೆಮುಂದೆ. ಎಷ್ಟಾದರೂ ಕನ್ನಡ ರಾಜ್ಯದ ಮುಖ್ಯ ನಗರ; ಎಲ್ಲಿಯಾದರೂ ಕನ್ನಡದಲ್ಲಿ ಬರೆದಿರಬಹುದಲ್ಲ-ಎಂಬ ಆಶೆಯಿಂದ ಹಾಗೆಯೆ ನಡೆದೆ, ನಡೆದೇ ನಡೆದೆ. "ಅಸೋಸಿಯೇಷನ್" ಆಯ್ತು, "ಫ್ರೀ ಮಾರ್ಕೆಟಿಂಗ್ ಬೋರ್ಡ್" ಬಂದಿತು, "ಎಲೆಕ್ಟ್ರಿಕ್ ಅಪ್ಲೈಯೇನ್ಸಿಸ್ ಸಪ್ಲೈ ಸ್ಟೋರ್ಸ್" ಮಿಂಚಿಹೋಯಿತು, "ಫೇನ್ಸಿ ಗುಡ್ಸ್" ಕಂಡದ್ದಾಯಿತು, ಕೊನೆಗೂ ನಾನು ಯಾಕೆ ಬಂದೆ, ಎಲ್ಲಿ ನಡೆದಿದ್ದೇನೆ ಎಂಬುದೆ ತಿಳಿಯದೆ ಹೋಯಿತು. ನನಗೂ ನಿರಾಶೆ. ಇಡಿಯ ದಿನ ತಿರುಗಿದರೂ ಕನ್ನಡದಲ್ಲಿ ನನಗೆ ತಿಳಿಯುವಂತೆ ಒಂದೂ ಸಿಕ್ಕಬಾರದೆ? ಇಲ್ಲವೆ—ಇಲ್ಲಿಯ ಕನ್ನಡವೆ ಬೇರೆ ತರಹದ್ದಿದೆಯೆ? ಎಂದು ವಿಷಾದದಿಂದ ತಲೆ ಎತ್ತಿ ನೋಡುವಾಗ ಪರೀಕ್ಷೆಯಲ್ಲಿ ಗೆದ್ದ ಭಕ್ತನೆದುರು ಪರಮಾತ್ಮನಂತೆ, ಕಂಡಿತು ಕನ್ನಡದ ಭಾಷೆ! ದೂರದಿಂದ ಕಂಡೊಡನೆಯೆ ಹೃದಯ ಹಿಗ್ಗಿತು, ಕಣ್ಣು ಅರಳಿದುವು, ಕಾಲು ಧಾವಿಸಿದುವು. ಕಂಡಿತು, ಕಂಡಿತು, ಕಾಣುತ್ತಿದೆ—ಇದೊ ಧಾಳವಾಗಿ ಬರೆದಿದೆ—ನೋಡಿದೆ, ಓದಿದೆ—

"ಇಲ್ಲಿ ಕನ್‌ಡದಲ್ಲಿ ಬ್ರೋರ್ಡ್ಸುಗಳನ್ನ ಬರೆಯಲ್ಪಡತ್ತೆ" ಎಂದು; ತಟ್ಟನೆ ಆವೇಶದಿಂದ ಕಿರಚ್-ಅಲ್ಲಿ ಕೂಗಿದೆ.

"ಕನ್ನಡ ಮಾತಿಗೆ ಭಯವಾಗಲಿ" ಎಂದು.

—ಶ್ರೀರಂಗ

"ಬೋಳಾಜಿ"

ನವ್ಯ ಸೆಲೂನೊಂದನ್ನಿಟ್ಟು ಮುಡಿಯಾಗಿ ತಲೆ ಮಾಡಿದರೆ, ಹೇರಳ ಹಣವನ್ನು ಸುಖವಾಗಿ ಸಂಪಾದಿಸಬಹುದು ಎಂದು ನಮ್ಮ ನಯನಜ್‌ಮರಿ, ತಿರುಪತಿಯಲ್ಲಿ ಥಳ ಥಳಿಸುವ ಸೊಲೂನ್ ಒಂದನ್ನು ತೆರೆದನಂತೆ. ಸಾಕ್ಷಾತ್ ಸಚಿವರೇ ಬಂದು ಉದ್ಘಾಟಿಸಿದರಂತೆ.

ಸಾರಿಸಿ, ಗುಡಿಸಿ, ಹೊಸಿಲ ಹತ್ತಿರ ರಂಗೋಲಿ ಇಟ್ಟು ಮರಿ ಕಾದಿದ್ದಾನೆ. ಗಿರಾಕಿಗಳಿಗೆ. ಕಾದೇ ಇದ್ದ ಒಂದು ತಿಂಗಳ ತನಕ. ಬಾಡಿಗೆ ಕೂಡ ಹುಟ್ಟಲಿಲ್ಲ. ಸಚಿವರ ಸಂಬಂಧದವರು ಸಮೀಪ ದೋಸ್ತಿಗಳು ಬಂದು ತಲೆ ಮಾಡಿಸಿಕೊಂಡು ಶಿಫಾರಸು ಮಾಡ್ತೀವಿ ಅಂತ ಹೇಳಿ ಹೋದರೇ ವಿನಹಾ, ನಯಾಪೈಸಾ ಒಂದೂ ಗಿಟ್ಟಲಿಲ್ಲವಂತೆ.

ಯಾಕೆ ಹೀಗಾಯ್ತು? ಕೃಷ್ಣಾಜಿನವನ್ನೇ ಸೆಲೂನ್ ಮೇಲೆ ಕುರ್ಚಿಗಳಿಗೆ ಹಾಕಿಸಿದ್ದೇನೆ. ಗಂಗಾನೀರು, ಪುಷ್ಕರಿಣಿ ತೀರ್ಥ ಎಂದು ಬರಿಸಿದ ಚೊಂಬುಗಳಲ್ಲೇ ನೀರನ್ನು ಇಟ್ಟಿದ್ದೇನೆ. ಪ್ರಾಣಿಗಳ ಚರ್ಬಿ ಇಲ್ಲದೇ ಇರುವ ಸಾಬೂನನ್ನೇ ಉಪ ಯೋಗಿಸುತ್ತೇನೆ ಎಂದು ಜಾಹಿರಾತು ಮಾಡಿಸಿದ್ದೇನೆ.

ಆದರೂ, ಆದರೂ ಯಾಕೆ ಯಾರೂ ಬರಲೊಲ್ಲರು?

ಎಲ್ಲರೂ ದೇವಸ್ಥಾನದ ಬೀದೀಲಿ, ಕಟ್ಟೆಬಳಿ ಕೂತುಕೊಂಡು ವರಸೆ ಪ್ರಕಾರ ಪಟ್ಟೆ ಎಳೆಸಿಕೊಂಡು, ಬಿಸಿಲಲ್ಲಿ ಬೇಯುತ್ತಾ ೧-೨ ತಾಸುಗಳು ಕೂಡುತ್ತಾರೆಯೇ ವಿನಹಾ ಇಲ್ಲಿಗೆ ಬಂದು ಸುಖವಾಗಿ ಮುಡಿಯಾಗಿ ಯಾಕೆ ತಿರುಪತಿ ಕ್ಷೌರವನ್ನು ಮಾಡಿಸಿ ಕೊಳ್ಳುವುದಿಲ್ಲ? ಎಂದು ಯೋಚಿಸಿದನಂತೆ

ಬಗೆ ಬರಿಯಲಿಲ್ಲ. ಸಂಕಟ ಬಂದರೆ ವೆಂಕಟರಮಣ!

ಮರಿ ಹರಕೆ ಹೊತ್ತನಂತೆ. "ವೆಂಕಟ ರಮಣಾ! ನನ್ನ ಸಂಪಾದನೆಯಲ್ಲಿ ಇನ್ನು ಮೇಲೆ ನಿನಗರ್ಧ ಕೊಡುತ್ತೇನೆ. ದಯಮಾಡಿ ವರಕೊಡು. ಗಿರಾಕಿಗಳು ಬರುವಂತೆ ಮಾಡು" ಎಂದು ಪ್ರಾರ್ಥಿಸಿದಂತೆ.

ಆ ರಾತ್ರಿ ಮರಿಗೆ ಕನಸುಬಿತ್ತಂತೆ.

ತಿರುಪತಿ ಸ್ವಾಮಿಯು ಪ್ರತ್ಯಕ್ಷನಾದಂತಾಗಿ "ವತ್ಸ ಸೆಲೂನಿನ ಹೊರಬಾಗಿಲಲ್ಲಿ ಬೋಳಾಜಿ ಕ್ಷೌರದ ಸೆಲೂನ್ ಅಂತ ಬರೆದ ದೊಡ್ಡ ತೂಗುಹಲಗೆಯೊಂದನ್ನು ಹಾಕು." ಎಂದು ಹೇಳಿದಂತಾಯಿತಂತೆ.

"ಭಗವಂತ! ಬಾಳಾಜಿ ಅಂತ ಬರೆಯಬೇಕಲ್ಲವೇ ಹಾಗಲ್ಲವೇ ನಿನ್ನ ದಿವ್ಯ ನಾಮ" ಎಂದು ಪ್ರಶ್ನಿಸಿದನಂತೆ.

"ವತ್ಸ! ಹೇಳಿದಂತೆ ಕೇಳು, ಮನುಷ್ಯರ ಮನಸ್ಸಿನ ಅಂತರ ನಿನಗೇನು ಗೊತ್ತು" ಎಂದು ತಿರುಪತಿ ಸ್ವಾಮಿ ಹೇಳಿದಂತಾಯಿತಂತೆ.

ಮಾರನೆ ದಿನವೇ ಸಾಲಮಾಡಿ ಕನಸಿನಲ್ಲಿ ಕಂಡ ಭಗವಂತನ ಅಪ್ಪಣೆಯಂತೆ ಬೋರ್ಡು ಬರೆಸಿ ತೂಗು ಹಾಕಿದನಂತೆ.

ಆ ದಿನವೇ ನಾಲ್ಕು ಜನರು ಸೆಲೂನಿಗೆ ಬಂದು " ಏನಯ್ಯಾ! ಇಷ್ಟೂ ತಿಳಿಯ ಲಿಲ್ಲವೇ ನಿನಗೆ! ಬಾಳಾಜಿ ಅಂತ ಬರೆಸುವುದನ್ನು ಬಿಟ್ಟು ತಪ್ಪು ಬರೆಸಿದ್ದೀಯಲ್ಲಾ! ಅಂತ ಹೇಳಿ ಕ್ಷೌರ ಮಾಡಿಸಿಕೊಂಡು ಹೋದರಂತೆ. ನಿಮ್ಮ ಸಲಹೆಗೆ ಅತ್ಯಂತ ವಂದನೆಗಳು ಅಂತ ಮರಿಯ ಕೈಲಿ ಧನ್ಯವಾದ ಹೇಳಿಸಿಕೊಂಡೇ ಹೋದರಂತೆ.

ಆ ತಿಂಗಳಿನಲ್ಲಿ ಮರಿ ೩೦೦ ರೂಪಾಯಿ ಸಂಪಾದಿಸಿದನಂತೆ. ೧೫೦ ರೂಪಾಯಿ ಗಳನ್ನು ದೇವಸ್ಥಾನದ ಹುಂಡಿ ಪೆಟ್ಟಿಗೆಗೆ ಹಾಕಿದನಂತೆ ಹಾಕಿ ಬಂದ ರಾತ್ರಿ "ಭಗವಂತಾ ನಿನ್ನ ದಯೇ ಅಪಾರ" ಅಂತಂದು ಮಲಗಿಕೊಂಡನಂತೆ.

ರಾತ್ರಿ ಕನಸಿಲ್ಲಿ ಯಥಾಪ್ರಕಾರ ಭಗವಂತ ಬಂದು "ವತ್ಸ! ತಿಳಿಯತೇ ಈಗ ಮನುಷ್ಯನ ಮನಸಿನ ಮರ್ಮ! ನೀನು ತಪ್ಪಿ ಮಾಡಿದಿ ಅಂತ ಅವ ನಿನಗೆ ಬಂದು ಹೇಳುವಂತಾದರೆ, ನೀನು ಅವನಿಗೆ ಧನ್ಯವಾದ ಒಪ್ಪಿಸಿದರೆ, ನಿನ್ನ ಕೈಲೇ ತಲೆ ಬೋಳಿಸಿಕೊಂಡು ಹೋಗ್ತಾನೆ. ಅರ್ಥವಾಯಿತೇ ಮನುಷ್ಯ ಎಂತಹ ಮಂಕ ಅಂತ. ಅಂದ ಹಾಗೆ ಹರಕೆ ಹುಂಡಿಗೆ ನಿನ್ನೆ ಹಾಕಿದ ರೂಪಾಯಿಗಳಲ್ಲಿ ನಾಲ್ಕು ಖೋಟಾ ಇವೆ. ನಾಳೆ ಬೆಳಿಗ್ಗೆ ನಾಲ್ಕು ಸಾಚಾ ರೂಪಾಯಿಗಳನ್ನು ತಂದು ಹಾಕು. ದೇವತೆಗಳು ನಿಮ್ಮಂತೆ ಮಂಕರಲ್ಲ. ನೆನಪಿರಲಿ" ಎಂದು ಹೇಳಿದಂತಾಯಿತಂತೆ.

—ಬಚ್ಚಿ

ಈ ವರ್ಷ ಬರಲಿರುವ ಕಾಮನ ಹಬ್ಬಕ್ಕೆ ಸುಡಲು ಪಂಚಶೀಲದ ಪ್ರತಿಗಳು ಹುಡುಗರಿಗೆ ಹೇರಳವಾಗಿ ಸಿಗುವುದರಿಂದ

—ಮನೆ ಹೊರಗಿನ ಮರದ ತೂಗು ಹಲಗೆಗಳು ಸುರಕ್ಷಿತವಾಗಬಹುದು.

ನಂ ಸೊಸೈಟಿ ಮಾರ್ಜಾಲ!!

‘ಉಗ್ರ ವೀರ ನರಸಿಂಹಸ್ವಾಮಿ ಕೋ–ಆಪರೇಟಿವ್ ಸೊಸೈಟಿ ಲಿಮಿಟೆಡ್’ನ ಆನರರಿ ಸೆಕ್ರೆಟರಿ ಶ್ರೀ ಗಿಣಿಯಪ್ಪನವರು ಸದರೀ ಸೊಸೈಟಿಯ ಮೇನೇಜರ್ ಶ್ರೀ ಮುನಿಯಪ್ಪನವರಿಗೆ ಒಂದು ಆಫೀಸ್ ಆರ್ಡರ್ ಹಾಕಿದರು:

‘ಮ್ಯಾನೇಜರ್ ಮುನಿಯಪ್ಪನವರೇ, ಈ ಸಾರಿಯ ಲೆಕ್ಕವನ್ನೂ ಸ್ಟೋರ್ಸಿನ ಪುಸ್ತಕಗಳನ್ನೂ ಅಖಂಡವಾದ ಬಿಲ್‌ಬುಕ್‌ಗಳನ್ನೂ ನಾವು ಅಹೋರಾತ್ರಿ ಕಣ್ತೆರೆದು ಪರಿಶೀಲಿಸಿದೆವು. ನಮ್ಮ ಜತೆಯಲ್ಲಿ ಕಮಿಟಿ ಹಾಡಿಟರ್ ಶ್ರೀ ತಿಂಮಣ್ಣನವರೂ ಟ್ರೆಜೆರೆರ್ ಶ್ರೀ ಪಿಳ್ಳಪ್ಪನವರೂ ಹಾಜರಿದ್ದು ಅನೇಕ ಸಂಗ್ತಿಗಳನ್ನು ಥಕ್ಕನೆ ಕಂಡು ಹಿಡಿಯಲು ಸಹಕರಿಸಿದರು. ನಾವು ನಿಮಗೆ ಈ ರೀತಿ ತಾಕೀತು ಮಾಡುತ್ತಿದ್ದೇವೆ;

ಸ್ಟೋರಿನ ಪುಸ್ತಕದಲ್ಲಿ ಎರಡು ಹಾಲಿನಪುಡಿ ಡಬ್ಬಗಳು, ಒಂದು ವೀಸೆ ಗೋಡಂಬಿ, ಕಾಲು ಮಣ ಸಕ್ಕರೆ, ಅರ್ಧಮಣ ಬೆಲ್ಲ, ಹತ್ತು ಸೇರು ಬಾದಾಮಿ ಕಾಣೆಯಾಗಿದೆ. ನಾಳೆ ಸೂರ್ಯಾಸ್ತಮವಾಗುವುದರೊಳಗೆ ಇದಕ್ಕೆ ತಕ್ಕ ಕಾರಣವನ್ನು ವ್ಯಕ್ತಪಡಿಸಿ ಲಿಖಿತ ಮೂಲಕ ನಮಗೆ ತಿಳಿಸದಿದ್ದಲ್ಲಿ ನಿಮ್ಮ ಮೇಲೆ ಅಗತ್ಯ ಕ್ರಮಗಳನ್ನು ಕೈಕೊಳ್ಳಬೇಕಾದೀತೆಂಬುದನ್ನು ನಿಮಗೆ ಈ ಮೂಲಕ ಹೇಳಲು ವಿಷಾದಿಸುತ್ತೇವೆ’.

ಉ.ವೀ.ನ. ಸ್ವಾಮಿ ಕೋ–ಆ. ಸೋ ಮ್ಯಾನೇಜರ್ ಶ್ರೀ ಮುನಿಯಪ್ಪನವರು ಸ್ಟೋರ್ಸ್ ಡಿಪಾರ್ಟ್‌ಮೆಂಟ್ ಛೀಫ್ ಕ್ಲಾರ್ಕ್ ಶ್ರೀ ಸಿಕ್ಕಪ್ಪನವರಿಗೆ ಒಂದು ಮೆಮೋ ಹಾಕಿಸಿದರು:

‘ಶ್ರೀ ಸಿಕ್ಕಪ್ಪನವರೇ, ಆನರೆರಿ ಸೆಕ್ರೆಟರಿಯವರ ಆಫೀಸ್ ಆರ್ಡರ್ ಮೇರೆ ನಾನು ನಿಮಗೆ ಈ ಕೆಳಕಂಡ ಮೆಮೋ ಕಳಿಸಿದ್ದೇನೆ: (ಕಾಣೆಯಾದ ಪದಾರ್ಥಗಳ ಪಟ್ಟಿ)

ಇದಕ್ಕೇನು ಕಾರಣವೆಂಬುದನ್ನು ನಾಳೆ ಬೆಳಿಗ್ಗೆ 10 ಗಂಟೆಯೊಳಗೆ ತಿಳಿಸದಿದ್ದಲ್ಲಿ ನಿಮ್ಮನ್ನು ಸೆಕ್ರೆಟರಿಯವರ ಮುಂದೆ ಹಾಜರುಮಾಡಿ ಮುಂದಿನ ಕ್ರಮ ಕೈಕೊಳ್ಳಬೇಕಾದೀತೆಂಬುದನ್ನು ತಿಳಿಸಲು ವಿಷಾದಿಸುತ್ತೇನೆ’.

ಛೀಫ್‌ಕ್ಲಾರ್ಕ್ ಶ್ರೀ ಸಿಕ್ಕಪ್ಪನವರು ಜೂನಿಯರ್ ಕ್ಲಾರ್ಕ್ (ಟೆಂಪರರಿ) ಶ್ರೀ ಬೆಟ್ಟಪ್ಪನವರಿಗೆ ಹೀಗೆ ಮೆಮೋ ಬರೆಸಿದರು:

‘ಶ್ರೀ ಬೆಟ್ಟಪ್ಪನವರೇ, ಈ ಕೆಳಕಂಡ ಕಾಣೆಯಾದ ಸಾಮಾನುಗಳು ಆನರೆರಿ ಸೆಕ್ರೆಟರಿಯವರ ಗಮನಕ್ಕೆ ಬಂದಿದೆ. ಈ ಕ್ಷಣ ಅದಕ್ಕೆ ಕಾರಣವೇನೆಂಬುದನ್ನು

ನೀವು ತಿಳಿಸದಿದ್ದಲ್ಲಿ (ಲಿಖಿತ ಮೂಲಕ) ಮುಂದಿನ ಕ್ರಮ ಕೈಕೊಳ್ಳಲಾಗುವುದು. (ಕಳೆದುಹೋದ ಪದಾರ್ಥಗಳ ಪಟ್ಟಿ)

ಶ್ರೀ ಬೆಟ್ಟಪ್ಪನವರು ಶ್ರೀ ಸಿಕ್ಕಪ್ಪನವರಿಗೆ ಈ ರೀತಿ ಉತ್ತರಿಸಿದರು: 'ನಾನೇನು ಮಾಡಲಿ ಸ್ವಾಮಿ, ಪದಾರ್ಥಗಳ ಲೆಕ್ಕ ಬರೆಯುವವನು ನಾನಾದರೂ ಪದಾರ್ಥ ಗಳನ್ನು ನೋಡಿಕೊಳ್ಳುವವನು ಸ್ಟೋರ್ಸ್‌ನ ಜವಾನ ಕಲ್ಲಪ್ಪನೊಬ್ಬನೇ! ಕಲ್ಲಪ್ಪ ನನ್ನು ವಿಚಾರಿಸಿದೆ. ಅವನು ಸ್ಟೋರ್ಸಿನಲ್ಲಿ ವಿಪರೀತ ಇಲಿಗಳ ಹಾವಳಿಯಿದ್ದು ದಿನೇದಿನೇ ಪದಾರ್ಥಗಳೆಲ್ಲ ನಾಪತ್ತೆ ಆಗುವುದು ಹೆಚ್ಚುತ್ತಿದೆಯೆಂದು. ಇಲಿಗಳು ಸೇರಿರುವುದಂತೂ ನಿಜ. ಇಷ್ಟುಮಾತ್ರ ಹೇಳಲು ನಾನು ಶಕ್ತ'

ಸದರೀ ಉತ್ತರಕ್ಕೆ ಸ್ವಲ್ಪ ಖಾರ ಬೆರಸಿ ಶ್ರೀ ಸಿಕ್ಕಪ್ಪನವರು ಶ್ರೀ ಮುನಿಯಪ್ಪ ನವರಿಗೆ ಕಳಿಸಿದರು. ಶ್ರೀ ಮುನಿಯಪ್ಪನವರು ಅದಕ್ಕೊಂದಿಷ್ಟು ಉಪ್ಪು ಹಾಕಿ ಶ್ರೀ ಗಿಣಿಯಪ್ಪನವರಿಗೆ ತಲುಪಿಸಿದರು. ಶ್ರೀ ಗಿಣಿಯಪ್ಪನವರಲ್ಲಿಗೆ ಅದು ಬಂದಾಗ ಹೀಗಿತ್ತು :

'ಸ್ವಾಮಿ, ಸೊಸೈಟಿಯ ಎಲ್ಲಾ ಡಿಪಾರ್ಟ್‌ಮೆಂಟ್‌ಗಳಲ್ಲಿರುವ ಪುಸ್ತಕಗಳ ಅಲಮೇರ ಹಾಗೂ ಹಳೇ ರಿಕಾರ್ಡ್‌ಗಳನ್ನಿಡುವ ಬೀರುಗಳಲ್ಲಿಯೂ ಸಾಮಾನು, ದಿನಸಿ ವಗ್ಯೆರೆಯಿರುವ ಸ್ಟೋರ್ಸ್ ಹಾಗೂ ಗೊಡೋನ್‌ಗಳಲ್ಲಿಯೂ ಬಹಳ ಇಲಿ, ಹೆಗ್ಗಣಗಳು ಸೇರಿವೆ. ಸದರೀ ಇಲಿ–ಹೆಗ್ಗಣಗಳು ಬಹಳ ಬಲಶಾಲಿಗಳಾಗಿದ್ದು ಪದಾರ್ಥಗಳ ಪೆಟ್ಟಿಗೆಗಳನ್ನೇ ಒಡೆದುಹಾಕುವಷ್ಟು ಹೆಚ್ಚಿಕೊಂಡಿವೆಯಲ್ಲದೆ ಬಿಲ್ಲು ಬುಕ್ಕುಗಳೇ ಮುಂತಾದ ಉಪಯುಕ್ತ ಗ್ರಂಥಗಳನ್ನೆಲ್ಲ ನಾಪತ್ತೆಯಾಗುವಂತೆ ಕತ್ತರಿಸಿ ತಿಂದುಹಾಕುವಷ್ಟು ಕೊಬ್ಬಿವೆ'

ಆನೆರರಿ ಸೆಕ್ರೆಟರಿ ಶ್ರೀ ಗಿಣಿಯಪ್ಪನವರು ಅದನ್ನು ಓದಿ ಕಮಿಟಿಯ ಡೈರೆಕ್ಟ ರುಗಳಿಗೆ ತಿಳಿಸಿದರು. ಗೋಕುಲಾಷ್ಟಮಿಯ ದಿನ ಸೇರಿದ ಡೈರೆಕ್ಟರುಗಳ ಮೀಟಿಂಗಿ ನಲ್ಲಿ ಒಂದು ಬೆಕ್ಕನ್ನು ಸೊಸೈಟಿಯಲ್ಲಿ ಸಾಕುವಂತೆ ತೀರ್ಮಾನಿಸಲಾಯಿತು.

ಶ್ರೀ ಗಿಣಿಯಪ್ಪನವರು ಮಾರನೆಯ ದಿನವೇ ಐವತ್ತು ರೂಪಾಯಿಗಳಿಗೆ ಮೀರದ ಖರ್ಚಿನಲ್ಲಿ ಸ್ಥಳೀಯ ವರ್ತಮಾನ ಪತ್ರಿಕೆಗಳಲ್ಲಿ ಒಂದು ಬೆಕ್ಕಿಗಾಗಿ ಜಾಹಿ ರಾತು ಹಾಕಿಸಿದರು. ಬರುವ ಬೆಕ್ಕು ಯಾರ ಮುಲಾಜಿನಲ್ಲೂ ಇರಕೂಡದೆಂಬು ದನ್ನು ಡೈರೆಕ್ಟರುಗಳು ಬಾಯಲ್ಲಿ ಮಾತನಾಡಿ ತೀರ್ಮಾನಿಸಿದ್ದರಿಂದ ಬೆಕ್ಕನ್ನು ಕೊಳ್ಳುವುದೇ ಲೇಸೆಂದು ಅಭಿಪ್ರಾಯಪಡಲಾಗಿದ್ದುದರಿಂದ ಸದರೀ ವ್ಯವಹಾರವನ್ನು ಅಫಿಷಿಯಲ್ಲಾಗಿ ಪ್ರಕಟಿಸಲಾಯ್ತು.

ಗೊತ್ತಾದ ದಿನ ಸಹಸ್ರಾರು ಸಂಖ್ಯೆಯಲ್ಲಿ ಮಾರ್ಜಾಲಗಳನ್ನು ಹಿಡಿದು ಕೆಲಸ ವಿಲ್ಲದವರು ಸೊಸೈಟಿಗೆ ತಂದರು. ಆನೆರರಿ ಸೆಕ್ರೆಟರಿಯವರ ಕೊಠಡಿಯಲ್ಲಿ ಒಂದೇ ಸಮನೆ ಮಾರ್ಜಾಲಗಳು ಅರಚಿಕೊಂಡವು. ಸರಿ, ಸೊಸೈಟಿಯ ಪರ್ಚೇಸಿಂಗ್ ಕಮಿಟಿಯವರು ಒಂದು ಬೆಕ್ಕನ್ನು ಆರಿಸಿ ಬೆಲೆ ಕೇಳಿದರು. ಅವರೇ ಒಂದು ಬೆಲೆ

ಕಟ್ಟಿ ಕೊಂಡ ಶಾಸ್ತ್ರ ಮುಗಿಸಿಕೊಂಡು ಬಿಲ್ ಪೇಮೆಂಟ್ ಮಾಡಿಸುವವರೆವಿಗೂ ಅಲ್ಲೇ ವಿಧಿವತ್ತಾಗಿ ಇದ್ದರು.

ಬೆಕ್ಕು ಸೊಸೈಟಿಯನ್ನು ಗಾಬರಿಯಿಂದ ಸೇರಿತು. ಸೇರಿ ಅದೆಷ್ಟೋ ದಿನಗಳಾದರೂ ಅದಕ್ಕೆ ಒಂದೇಒಂದು ಇಲಿಯೂ ಸಿಗದುದರಿಂದ ಬೆಕ್ಕು ಕೃಶವಾಗತೊಡಗಿತು. ಬೆಕ್ಕಿನ ಅನಾರೋಗ್ಯವನ್ನು ಶ್ರೀ ಮುನಿಯಪ್ಪನವರು ಶ್ರೀ ಗಿಣಿಯಪ್ಪನವರಿಗೆ ರಿಪೋರ್ಟ್‌ಮಾಡಿದರು. ತಿರುಗಿ ಡೈರೆಕ್ಟರುಗಳು ಚರ್ಚಿಸಿದರು. ಯೋಗ್ಯ ವೈದ್ಯರಿಗೆ ಬೆಕ್ಕನ್ನು ಹ್ಯಾಂಡೋವರ್ ಮಾಡಲಾಯಿತು. ಡಾಕ್ಟರ್ರ ಬಿಲ್ ನಲವತ್ತು ರೂಪಾಯಿಗಳು ಪಾಸಾಗಿ ಪೇಮೆಂಟ್ ಆಯಿತು.

ಪದಾರ್ಥಗಳು ಕಡಿಮೆಯಾಗುತ್ತಲೇ ಇದ್ದುವು. ಬೆಕ್ಕು ಇಲಿಯನ್ನು ಕಾಣದೆ ಕೃಶವಾಗುತ್ತಲೇ ಇತ್ತು. ಡಾಕ್ಟರು ಔಷಧಿ ಮಾಡುತ್ತಲೇ ಇದ್ದರು. ಅಲ್ಲದೆ ಬೆಕ್ಕಿನ ತಿಂಗಳ ಖರ್ಚು ಬೇಕಷ್ಟು ನಡೆಯುತ್ತಲೇ ಇತ್ತು. ಕೊನೆಗೊಂದು ದಿನ ಬೆಕ್ಕು ವಿಷಮಶೀತ ಜ್ವರದಿಂದ ಸತ್ತುಹೋಯಿತು.

ಆ ವರ್ಷ ಸೊಸೈಟಿಯ ಆಡಿಟ್ ರಿಪೋರ್ಟ್‌ನಲ್ಲಿ ಈ ರೀತಿ ತೋರಿಸಲಾಗಿತ್ತು :

	ರೂ. ನ.ಪೈ.
೧. ಸೊಸೈಟಿಯಲ್ಲಿ ನಾಪತ್ತೆಯಾದ ಸಾಮಾನುಗಳ ಹೋಲ್ಸೇಲ್ ಧಾರಣೆಯ ಪ್ರಕಾರ ಬೆಲೆ	೩,೧೬೮ – ೧೫
೨. ಬೆಕ್ಕಿನ ಲೆಕ್ಕದ ವಿವರಣೆ:—	
ಅ. ಬೆಕ್ಕಿಗಾಗಿ ಮಾಡಿದ ಜಾಹಿರಾತು	೫೦ – ೦೦
ಆ. ಬೆಕ್ಕನ್ನು ಕೊಂಡದ್ದು	೩೫ – ೦೦
ಇ. ಬೆಕ್ಕಿನ ಸಾಕಾಣೆಗೆ ಆದ ಒಟ್ಟು ಖರ್ಚು (ಹಾಲು, ಅನ್ನ, ಮಾಂಸ, ಮೀನು ಇತ್ಯಾದಿ....)	೪೬೬ – ೧೦
ಈ. ಬೆಕ್ಕಿಗೆ ಜ್ವರ ಬಂದಾಗ ಒಟ್ಟು ಆದ ವೈದ್ಯರ ಖರ್ಚು	೯೧ – ೭೪
ಉ. ಬೆಕ್ಕು ಸತ್ತಾಗ ಹೂಳಿಸಲು ಹಿಡಿದ ಖರ್ಚು	೫ – ೦೦
ಊ. ಬೆಕ್ಕಿನ ತಿಥಿ	೨೫ – ೦೦
ಒಟ್ಟು ಹೋದ ಹಣ	೩,೮೪೦ – ೯೯

ಈ ಹಣವನ್ನು ರೈಟ್ ಆಫ್ ಮಾಡಬೇಕೆಂಬ ಯೋಗ್ಯ ಸಲಹೆಯನ್ನು ಡೈರೆಕ್ಟರುಗಳು ಜನರಲ್ ಬಾಡಿಯಲ್ಲಿ ಮಂಡಿಸಿದರು. ಸ್ವಲ್ಪ ವಾದ ಆಯಿತು. ಆದರೂ ಜನರಲ್‌ಬಾಡಿಯಲ್ಲಿ ಸದರಿ ಹಣವನ್ನು ರೈಟ್ ಆಫ್ ಮಾಡಲಾಯಿತೆಂಬ ಅಂಶವು ಸರ್ವಾನುಮತದಿಂದ ಅಂಗೀಕರಿಸಲಾಯಿತೆಂಬುದನ್ನು ಸೊಸೈಟಿಯಲ್ಲಿ ರೆಕಾರ್ಡ್ ಮಾಡಲಾಯಿತು.

ನವ್ಯ ಶ್ರೀ ಚಂದ್ರಶೇಖರ್

ರೂಟ್ ನಂ. ೩೩

ಏನ್ರಪ್ಪಾ, ಈ ಬಸ್ಸು ಚಾಮರಾಜಪೇಟೆ ಅಂಗಡಿಬೀದಿ ಮೇಲೆ ಹೋಗುತ್ಯೆ?.... ಸರಿ, ಇದಾದರೂ ಹೋಗುತ್ತಲ್ಲಾ, ಸ್ವಲ್ಪ ಜರುಗೀಮ್ಮಾ... ....ಓಹೋ, ನೀವೇ. ಎಷ್ಟು ವರ್ಷಗಳಾಯ್ತು ನೋಡಿ........ಯಾಕ್ರಿ, ಗುರ್ತು ಸಿಗಲಿಲ್ವೇ, ನಾನು, ಗೋದೂಬಾಯಿ. ಅದೇ ಆ ಪ್ರಾಣದೇವರ ಗುಡಿ ಬೀದೀಲಿ ನಿಮ್ಮನೆಯಿಂದ ನಾಲ್ಕನೆ ಮನೆಲಿರಲಿಲ್ಲವೇ ? ನಾವು........ಆ ! ಗುರ್ತು ಸಿಕ್ತು, ನಿಮ್ದೇನೂ ತಪ್ಪಿಲ್ಲ. ನನ್ನ ಈ ಅವತಾರ್ದಲ್ಲೆಲ್ಲಿ ನೋಡಿದ್ದಿರಿ, ಅಯ್ಯೋ, 'ಮೂರು ವರ್ಷಗಳಾಯ್ತಮ್ಮ ಮಹರಾಯ್ತಿ ಕಣ್ಣುಮುಚ್ಚಿ, ನೋಡಿದ್ರಲ್ಲಾ, ನಂಗೂ ಅವ್ರಿಗೂ ಎಲ್ಲಿಂದೆಲ್ಗೆ, ಒಂದು ವರಸಾಮ್ಯವೇ ಒಂದು ಇದೇ. ನಾನು ಇರೋದು ಹೀಗೆ, ಕಪ್ಪಗೆ. ಅವರೋ ಒಳ್ಳೆ ಪರಂಗಿಹಣ್ಣಿನ ಬಣ್ಣವಮ್ಮಾ, ನೀವೇ ನೋಡಿದ್ರಲ್ಲಾ ಅಷ್ಟು ವರ್ಷಗಳಾದ್ರೂ ಇನ್ನೂ ಮೋರೆ ಬಣ್ಣ ಕೂಡ ಕಂದಿರಲಿಲ್ಲಾ........ ಈಗಲೇ, ನಾವು ಈಗ ಮಲ್ಲೇಶ್ವರ ದಲ್ಲಿದೇವೆ... .... ನೀವು ಅಲ್ಲೇನೇ, ಒಂದಿನ ನಿಮ್ಮನೇಗೆ ಬರಬೇಕ್ರಿ....ಈ ಕಡೆನೇ, ನನ್ನ ಚಿಕ್ಕಮ್ಮನ ಮಗ್ಳ ಗಂಡ ಹೋಗ್ಬಿಟ್ಟ. ಅವರ ಮನ್ಗೆ ಹೊರ್ಟಿದೀನಿ. ಇನ್ನೂ ಅಂತ ವಯಸ್ಸೇನಿಲ್ರಿ, ಪಾಪ ! ನಂಗಿಂತ ಒಂದು ಆರೇಳು ವರ್ಷ ದೊಡ್ಡವನು ಅಷ್ಟೆ. ಇನ್ನೂ 68–70 ರೊಳಗೆ.

........ಏನಪ್ಪಾ ಟಿಕೇಟೇ, ಚಾಮರಾಜಪೇಟೆ ಅಂಗಡಿಬೀದೀಗೆ, ಇಪ್ಪತ್ತು ನಾಯಿ ಪೈಸವೇ, ಈ ಲೆಕ್ಕವೇ ನನ್ಗೆ ಗೊತ್ತಾಗುಲ್ಲಮ್ಮ. ಮಗ ರುಪಾಯಿ ನೋಟು ಕೊಡುಕ್ಕೆ ಬಂದ, ನನ್ಗೆಲ್ಲಿ ಗೊತ್ತಾಗುತ್ತೆ ಚಿಲ್ರೆ ತೊಗುಳ್ಳುಕ್ಕೆ, ನೋಟು ಬೇಡ ಚಿಲ್ರೇನೇ ಕೊಡಪ್ಪ ಅಂದೆ ; ಪುಣ್ಯಾತ್ಮ ಚಿಲ್ರೇನೇ ಕೊಟ್ಟ........ ಕೊಡ್ತೀವಪ್ಪ, ಕೋಪ ಮಾಡ್ಕೋಬೇಡ, ಇಲ್ಲೇ ಸೊಂಟದಲ್ಲಿಟ್ಟಿದ್ದೆ. ಹು, ತಕೋ..........., ಇದೆಷ್ಟಪ್ಪ ಚಿಲ್ರೆ ವಾಪ್ಸು ಕೊಟ್ಟಿದ್ದು........ ಐದು ನಾಯಿ ಪೈಸಾನೇ, ಸರಿಯಾಗಿ ನೋಡಿ ಕೊಡಪ್ಪ .... ಇನ್ನೊಂದ್ಸಲಿ ನೋಡು. ಯಾಕಂತೀ, ನಾನು ಮುದ್ಕಿ, ಬೇರೆ ದುಡ್ಡಿಲ್ಲ, ಸಾವಿನ ಮನೇಗೆ ಹೋಗ್ತಿದೀನಿ. ಈ ಕಾಸು ನಡೀದಿದ್ದರೆ ಇನ್ನು ವಾಪ್ಸು ಬರುಕಾಗೋಲ್ಲಪ್ಪ. ಅಲ್ಲೇ ಇದ್ಬಿಡಬೇಕಾಗುತ್ತೆ, ಅಲ್ಲೇ. ಬೆಳಗ್ನಿಂದ ಉಪ್ವಾಸ, ನಂಗೇನಿಲ್ಲ ನಿಂಗೇ ಸುತ್ತಿಕೊಳ್ಳುತ್ತೆ ಪಾಪ .... ನಂದೇನಪ್ಪ ಪುರಾಣ ಹೂ, ಸರಿಯಾಗಿದ್ರೆ, ನಿನ್ನ ದರ್ಮ ನನ್ನ ಕರ್ಮ ಮುದುಕೀಗೆ ಮೋಸಮಾಡಿದ್ರೆ ; ನೋಡಮ್ಮಾ, ನೀವಾದರೂ, ಸರಿಯಾಗಿದ್ಯೇ, ಯಾಕೇಂದ್ರೆ ನಾನು ಅವಳ್ನ ನೋಡ್ಕೊಂಡು ವಾಪ್ಸು ಬರಬೇಕು. ಮನೇಲಿ ನಮ್ಮ ರತ್ನನ ಅತ್ತೆ ಮಾವ ಎಲ್ಲರೂ ಬಂದಿದಾರೆ. ....ಏನಂದ್ರಿ, ನಿಮ್ಗೆ ಗೊತ್ತಿಲ್ವೇ. ಸರಿಯಾಗಿ ಒಂದು ವರ್ಷ ಆಯಿತು ಮದ್ವೇ ಆಗಿ, ಬಾಣಂತನಕ್ಕೆ ಬಂದಿದಾಳೆ. ಮಗು ಬಾಣಂತೀನ ನೋಡುಕ್ಕೆ ಅವರು ಬಂದಿದಾರೆ.

ಮದುವೆ ಬೋಜನ್ನಾಗಾಯ್ತು. ನನ್ನ ದೊಡ್ಡಮಗ ಸೊಸೆ ಬಂದು ಅವರೇ ನಿಂತ್ಕೊಂಡು ಮಾಡಿದರಮ್ಮಾ. ಎರಡು ಕೈಲಿ ಕರ್ಚು ಮಾಡ್ದ. ನೋಡ್ದೊರೆಲ್ಲ ಎಂಥಾ ಮದ್ವೆ, ಎಂಥಾ ಮದ್ವೇಂತ ಬಾಯಲ್ಲಿ ಬೆರಳಿಟ್ಕೊಂಡ್ರು. ಅಂದ್ರೆ ಅವರ ಅಪ್ಪನೇನು ಇಟ್ಟಿರಲಿಲ್ಲಾಂತ ತಿಳ್ಕೋಬೇಡಿ. ಮದ್ವೆಗೆಂತಲೇ ಮೂರುಸಾವಿರ ಇಟ್ಟು ಸತ್ರು, ಮಹರಾಯರು, ಮಕ್ಕಳಿಗೇನು ಕಮ್ಮಿ ಮಾಡ್ಲಿಲ್ಲ. ದೊಡ್ಡೋನ್ನ ಫಾರಿನ್ನಿಗೆ ಕಳಿಸಿ ಓದಿಸಿದ್ರು. ಎರಡನೆಯೋನ್ನ, ಆಮೇಲೆ ಕಡೆಯೋನು ನೋಡಿದ್ರಲ್ಲಾ, ಹನುಮಾನ್ನ ಗ್ರಾಜುಟ್ ಮಾಡಿದರು. ಹನುಮಾನ್ನ ನೋಡಿದ್ರೆ ಅವ್ರಿಗೆ ಎಲ್ಲಿಲ್ಲದ ಪ್ರೀತಿ. ಒಂದು ಸೈಟು ಬೇರೆ ಕೊಂಡ್ಕೊಂಡಿದಾರಮ್ಮಾ.......ಹೌದು, ಆದರೆ ಈ ಮುಂಡೇದಕ್ಕೆ ಮನೇ ಕಟ್ಕೋಕ್ಕೆ ಆಗ್ದೆ ಒದ್ದಾಡ್ತಿವೆ; ಕಟ್ಕೊಳ್ಳತ್ವೆ ಅನ್ನಿ, ಹೇಗಿದ್ದರೂ ಆ ದೊಡ್ಡೋನು ದುರ್ಗಾಪುರದಲ್ಲಿ ಎಂಜನೀರು, 600-700 ಬರುತ್ತೆ. ಎರಡನೆಯೋನು ಹೈಸ್ಕೂಲು ಮೇಸ್ತ್ರು, ಹನುಮಾಗೆ ಬಾಂಕಿನಲ್ಲಿ ಕೆಲಸ. ಆಗ್ಲೇ ಪ್ಲಾನು ಗೀನು ಅಂತ ಓಡಾಡ್ತಿವೆ. ರತ್ನಳ ಮದ್ವೆ ಗಲಾಟೆ ಆಗೋಗಲಿ ಅಂತ ಇದ್ರು. ಯಾತಕ್ಕೆ ಹೇಳ್ದೇಂದ್ರೆ ಅವರು ಯಾರಿಗೆ ಏನೂ ಕಮ್ಮಿ ಮಾಡಿಲ್ಲ. ಆದ್ರೆ ನಂಗೆ ಅವರ ಜೊತೇಲಿ ಅನುಭವಿಸೋಕ್ಕೆ ಬರೀಲಿಲ್ಲಮ್ಮ. ಈ ಮುಂಡೇವು ಅನುಭವಿಸುತ್ವೆ. ಅನುಭವಿಸ್ಲಿ.

ದೊಡ್ಡೋನೂ ಬರ್ತಾನೆ ಇವತ್ತು ನಾಳೇಲಿ, ತಂಗೀನ, ಸೋದರಳಿಯನ್ನ ನೋಡೋಕೆ. ತಂಗೀನ ಕಂಡ್ರೆ ಪ್ರಾಣ ಮುಂಡೇದಕ್ಕೆ. ಇನ್ನು ಅವಳ ಅತ್ತೆ ಮಾವ ನಾಳೆ ಹೊರ್ಟುಬಿಡ್ತಾರೆ. ನಾನ್ಹೇಳ್ದೆ, ಇನ್ನೊಂದ್ವಾರ ಇರಿ ದೊಡ್ಡೋನು ಬರ್ತಾನೇಂತ. ಆಗೋಲ್ಲ ನಾಳೆ ಹೊರಡ್ತೀವಿ ಅಂದ್ರು, ಸರಿ ನಾಳೇನೆ ಔತಣ ಮಾಡ್ತೀನಿ ಅಂದೆ. ಔತಣ, ಗೀತಣ ಏನೂ ಇಟ್ಕೋಬೇಡಿ, ಬೆಳಿಗ್ಗೆ ಎಂಟು ಗಂಟೆ ರೈಲಿಗೇ ಹೊರಡ್ಬೇಕು ಅಂದ್ರು. ನೀವೇ ಹೇಳಿ, ಮತ್ತೈದೆ ಬೀಗಿತ್ತಿ ಬೇಕೂಂದ್ರೆ ಸಿಕ್ತಾರೆಯೇ, ಈಗ ನಾನು ಬಿಡ್ತೀನ್ಯೆ ಅಲ್ಲ ಅವ್ರು ಬಂದಾರೇ, ಈಗ ನಾನು ಬಿಟ್ಟೇನೇ. ಸರಿ, ಆಯಿತು ಅವರು 8 ಗಂಟೆ ರೈಲಿಗೆ ತಾನೆ ಹೊರಡೋದು. ನಾನು 4 ಗಂಟೇಗೇ ಎದ್ದು ಅವ್ರಿಗೆ ಒಬ್ಬಟ್ಟು ಹುಳಿಯನ್ನ ಮಾಡಿಟ್ಟೇ ಕಳಿಸ್ತೀನಿ ಬಿಡೋಳಲ್ಲ. ಅಂಗಡಿಯಿಂದ ರವಿಕೆ ಕಣಾನೂ ತರಿಸಿದೀನಿ.

-ಅಂದಾಗೆ, ಇನ್ನೂ ಬರಲಿಲ್ವೇನಪ್ಪ ಅಂಗಡಿ ಬೀದೀ.... ಏನಂದೇ, ಹಿಂದೇನೇ ಆಗೊಯ್ತೋ, ಹೇಳ್ಬಾರ್ದೆ ನಂಗೆ.......ಅಲ್ಲ ನೀನು ಅನ್ನೋದಕ್ಕೆ ನಾನು ಏನು ಲೆಕ್ಚರು ಹೊಡಿತಿದೀನಪ್ಪ, ಬಸ್ಸಿಗೆಲ್ಲ ಕೇಳಿಸೋ ಹಾಗೆ. ಮೆಲ್ಲಗೆ ನಾವು ಒಂದೆರಡು ಮಾತಾಡ್ಕೊಂಡ್ರೆ...... .ಸರಿ, ಹಿಂದಕ್ಕೋಗಿ ಎಡಕ್ಕೆ ತಿರಕ್ಕೊಬೇಕೇ ಬಿಸಿಲಲ್ಲಿ ಮುದಕೀನ ನಡೆಯೋ ಹಾಗೆ ಮಾಡಿದ್ಯಾ, ಸರಿ, ಮಾಡಿ ಪುಣ್ಯ ಕಟ್ಕೋ, ಬರ್ತಿವಮ್ಮಾ, ಸಿಕ್ತಾ ಇರಿ ಆಗಾಗ.......ಬರ್ಲಾ........

— ಕುಂಬಾರ

ಶ್ರೀ ಗುರು

ಮೀನ—ಚೇತನ

ಈ ಭರತವರ್ಷವೆಂಬ ಭಾರತ ಭೂಮಿಯಲ್ಲಿ, ಛಪ್ಪನ್ನೈವತ್ತಾರು ದೇಶಗಳುಂಟು. ಅವುಗಳಲ್ಲೊಂದಾದ ವಂಗದೇಶದಲ್ಲಿ ದಾದಪಂಥವೆಂದು ಪ್ರಸಿದ್ಧವಾದ ಹಠಯೋಗ ಮಾರ್ಗ ಪ್ರವರ್ತಕರಾದ ಮಚ್ಛೇಂದ್ರ, ಗೋರಖ, ಹಾರೀಪನಾಥರೆಂಬ ಮಹಾನ್ ಮಹಾನ್ ಪ್ರಭೃತಿಗಳು ಆಗಿಹೋದರು. ಅವರ ಚರಿತ್ರೆಯಂ ತಿಳಿಸುವ 'ಮೀನ–ಚೇತನ'ವೆಂಬ ಪ್ರಸಿದ್ಧ ವಂಗ ಗ್ರಂಥವೊಂದುಂಟು. ಇದು ಅದರ ಪರಿಚಯ ಲೇಖನವಲ್ಲ. ಇದು ಯಥಾಪ್ರಕಾರ ಮುಗಿಲುಹಳ್ಳಿಯ ಮಹಾನುಭಾವರಲ್ಲಿ ಒಬ್ಬರೆಂದು ಪರಿಗಣಿತರಾದ ಮುಗಿಲುಹಳ್ಳಿ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ಪ್ರೊಫೆಸರ್ ಕುರಿಯನ್ ಅವರ Mean (+ಅ) ಚೇತನವನ್ನು ಕುರಿತು ಬರೆದ ಲೇಖನವೆಂದೇ ಭಾವಿಸಬಹುದು. Mean ಮೆಂಟ್ಯಾಲಿಟಿ ಎಂಬಲ್ಲಿನ ಮೀನ್ ಇದಲ್ಲ. ಇದು ಕನ್ನಡ ಮೀನೇ ; ಇಂಗ್ಲಿಷಿನಲ್ಲಿ Something fishy ಎನ್ನುವ ಜಾತಿಗೆ ಸೇರಿದುದು.

ಇಲ್ಲಿಗೆ ನಮ್ಮ ಮುಗಿಲುಹಳ್ಳಿಯನ್ನು ನಮ್ಮ ಲೇಖನಾಪ್ರಪಂಚದಿಂದ ಬಹಿಷ್ಕರಿಸಬೇಕೆಂದೇ ನಾವು ಯೋಚಿಸಿದ್ದೆವು. ಆದರೀಗ ಮುಗಿಲುಹಳ್ಳಿಗೇ ಬಂದಿರುವುದರಿಂದ ಅದು ಹೇಗೆ ಸಾಧ್ಯವಾದೀತು? ವಿಶ್ವದ ಮಾನವಕುಲವನ್ನೇ ಪ್ರತಿನಿಧಿಸುವ ವ್ಯಕ್ತಿಗಳನ್ನು ಕುರಿತು ಬರೆಯುವ ಛಲ, ನಮಗಿಲ್ಲ. ಮಾನವನ ಅಂತರಾಳವನ್ನು ಹೊಕ್ಕು ಭೇದಿಸುವ ವಿದ್ಯೆಯೂ ನಮಗೆ ಕರಗತವಾಗಿಲ್ಲ. ಇರಲಿ.

ಮೊನ್ನೆ ಮತ್ತೆ ಮುಗಿಲುಹಳ್ಳಿಗೆ ಬಂದು ನೆಲೆಸಲು ಹೊರಟಾಗ ನನ್ನ ಹಳೆಯೂರು ನನ್ನನ್ನು ಸ್ವಾಗತಿಸಲೆಂದು ಕಾದು ನಿಂತಿರುವುದೇನೋ ಎಂಬ ಭ್ರಮೆ ನನಗೆ ಬಂತು. ಭ್ರಮ ನಿರಸನವೂ ಆಯ್ತು. ನನ್ನ ತರುಣ ಮಿತ್ರರೆಲ್ಲಾ ಕುರಿಯನ್ನರ ಕ್ಷಮಾಪಣಾ ದಿನಾಚರಣೆಯಲ್ಲಿ ಭಾಗವಹಿಸಲು ಹೋಗಿದ್ದರು.

ಕ್ಷಮಾಪಣಾ ದಿನಾಚರಣೆಯ ರಮ್ಯಚಿತ್ರವನ್ನು ನಾನು ಕೊಡಲು ಹೋಗುವುದಿಲ್ಲ. ಅದು ನನ್ನಿಂದ ಆಗದ ಕೆಲಸ "ಇಂದಿಗೆ ನಾಲ್ಕು ನೂರು ಮೂವತ್ತಾರು ವರ್ಷದ ಕೆಳಗೆ ವಂಗ ಸಾಹಿತ್ಯದ ಶುಭೋದಯವಾಯಿತು. ಶ್ರೀ — ರವರು ನಿರ್ಮಿಸಿದ ಮೀನ ಚೇತನವೇ ಆ ಶುಭೋದಯದ ಸೂರ್ಯ —" ಎಂದು ಆರಂಭಿಸಿ ನಾನು ಲೇಖನಗಳನ್ನು ಬರೆದಿದ್ದರೆ ಎಲ್ಲ ಪತ್ರಿಕೆಗಳಲ್ಲೂ ನಾನೇ ನಾನಾಗಿರಬಹುದು

ದಾಗಿತ್ತು. ನೂರು ವರ್ಷದ ಕೆಳಗೆ ಬಿಗ್‌ಬೆನ್ ಬಡಿದುಕೊಳ್ಳಲಾರಂಭಿಸಿತು; ಇನ್ನೂರೈವತ್ತು ವರ್ಷದ ಕೆಳಗೆ ಫಿಟ್ಸ್ ಜೆರಾಲ್ಡ್ ಏನೋ ಮಾಡಿದ, ಇತ್ಯಾದಿ ಬರೆದು ಎಷ್ಟು ಜನ ಉಲನ್ ಪ್ಯಾಂಟು ಹಾಕಿಕೊಂಡು ವಿಮಾನವೇರಿ ಮೆರೆಯುತ್ತಿಲ್ಲ? ಹಾಗೇ ಲೆಕ್ಕಹಾಕಿ ನೋಡಿದರೆ ಹದಿನಾರು ಬಿಲಿಯರ್ ವರ್ಷಗಳ ಹಿಂದೆ ಇದೇ ದಿನ ಮೀಬಾ ಅಮೀಬಾ ಆಯಿತು. ಅದನ್ನು ಕುರಿತು ಬರೆದರೆ ವಾಚಕರ ಗತಿಯೇನು? ತೊಂಡರಡಿಪ್ಪಡಿ ಆಳ್ವಾರರ ತಿರುನಕ್ಷತ್ರ, ಟೀಕಾಚಾರ್ಯರ ಪುಣ್ಯದಿನ, ಸ್ವಾತಂತ್ರ್ಯ ದಿನಾಚರಣೆ, ಭೂಜಯಂತಿ, ಯೂನೋ ದಿನಾಚರಣೆಗಳಿಂದ ನೊಂದು ಬೆಂದ ಜನರನ್ನು ಹಿಂಸಿಸಿ "ಇಂದಿಗೆ ಒಂದು ಲಕ್ಷ ವರ್ಷದ ಹಿಂದೆ ಇದೇ ದಿನ ಮೀನು ಮೀನಾಕ್ಷಿಯಾಯಿತು. (ಪ್ರೊ. ಹಾಲ್ಡೇನರನ್ನು,–ಬೇಕಿದ್ದರೆ ಕೇಳಿನೋಡಿ) ಆ ದಿನಾಚರಣೆ ಮಾಡುವಾ!" ಎನ್ನಲೇ. ಹೀಗೆ ಯೋಚಿಸುವುದರಿಂದಲೇ ನಾನು ಶುನಶ್ಶೇಫ ದಿನಾಚರಣೆ ಮಾಡಬೇಕಾಗಿದೆ ಎನ್ನಿ. ಅದರ ಸುದ್ದಿ ಬೇರೆ. ಹಾಗೆಯೇ ಕ್ಷಮಾಪಣಾ ದಿನಾಚರಣೆಯ ಸುದ್ದಿಯೂ!

ಸ್ವದೇಶೀ ಇಂಜಿನಿಯರುಗಳ ಸ್ವರ್ಗ:—ಎಂ.ಐ.ಟಿ. ಮೆಸಚುಸೆಟ್ಸ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಅಮೆರಿಕಕ್ಕೆ ಹೇಗೋ ಹಾಗೆ ಮುಗಿಲುಹಳ್ಳಿ ಇನ್‌ಸ್ಟಿಟ್ಯೂಟ್–ನಮ್ಮ ನಾಡಿಗೆ. ಸೂರ್ಯನ ಶಾಖವನ್ನು ಕೃತಕವಾಗಿ ನಿರ್ಮಿಸಬಲ್ಲ ಜೇಟ ಅಮೆರಿಕದಲ್ಲಿರಬಹುದು. ಅಲ್ಲಿ ಒಂದು ಮಿಲಿಯಾಂಶ್ ಸೆಕೆಂಡದಲ್ಲಿ ಸೂರ್ಯನ ಶಾಖ ಬಂದೀತು. ಅದನ್ನು ಮೀರಿದೆ ಎಂ.ಐ.ಟಿ. ವೇದಾಂತ ಸಿದ್ಧಾಂತದಂತೆ ತ್ರಿಕಾಲಾಬಾಧಿತವಾದ 'ಜೀಬ್ರ' ನಮ್ಮಲ್ಲಿದೆ. ಸೂರ್ಯನಲ್ಲಿ ಎಷ್ಟೇ ಶಾಖವಿರಲಿ, ರೊಂಟೆಂಪರೀಚರನ್ನು ಸದಾ ಕಾಲ ತೋರಿಸುತ್ತದೆ. ಅದು ನಿರ್ಮಿತವಾದುದ್ದು ಯಾರಿಂದ? ಅದರ ನಿ ರ್ಮಾ ತೃ ಪ್ರೊ|| ಕುರಿಯರ್! ಎಂ. ಐ. ಟಿ. ಯ ವೃದ್ಧಪಿತಾಮಹ!! ಹಳೇ ಹುಲಿ!!!

ಅವರು ಶಿಷ್ಯ ಪರಾಧೀನರು—ಶಿವನಿದ್ದ ಹಾಗೆ! 'ಒಲಿದು ಬಂದ ಶಿಷ್ಯ ಪಾಸೋ ಫೇಲೋ, ಯೋಗ್ಯನೋ ಅಯೋಗ್ಯನೋ, ಯಾವುದೂ ಅವರ ಕಣ್ಣಿಗೆ ಬೀಳದು. ನಂಬಿದವರಿಗೆ ತನ್ನನ್ನೇ ತೆತ್ತಿದ್ದಾರೆ. ನಂಬದವರಿಗೆ ಕೈಯ ಕೊಟ್ಟಹನೆಂಬ ಬಿರುದನ್ನು ಮೆರೆದಿದ್ದಾರೆ.

'ಅನ್ನೋದು ಆಡ್ಡಬಿದ್ದು ಅನ್ನು' ಎಂಬುದೇ ಕುರಿಯನ್ನರ ಘೋಷಣೆ. 'ನನ್ನನ್ನು ಪಾಸುಮಾಡಿ' ಎಂದು ಅಡ್ಡಬಿದ್ದೇ ಪಾಸಾದರು. 'ಕೆಲಸ ಕೊಡಿ' ಎಂದು ಅಡ್ಡಬಿದ್ದೇ ಕೇಳಿಕೊಂಡರು. ಕೆಲಸ ಸಿಕ್ಕು ಎಂ.ಐ.ಟಿ.ಯ ಲೆಕ್ಚರರ್ ಆದರು. 'ನಾನು ಮಾಡಿದ್ದೇ ಪಾಠ, ಬೇರೇನೂ ಕೇಳಬೇಡಿ' ಎಂದು ಅಡ್ಡಬಿದ್ದು (ಹುಡುಗರಿಗೆ) ಕಾಲುತಳ್ಳುತ್ತಿದ್ದರು. ಇಂಥ ನಿರುಪದ್ರವಿ ಅವರು.

ಆದರೆ ಮುಗಿಲುಹಳ್ಳಿಯ ಸೇಂಗಾಧೂಳಿನ ಗಾಳಿ ಅವರ ಮೇಲೆ ಬೀಸಿತು. ಒಂಡುನೀರು ನೆತ್ತಿಗೆ ಏರಿತು. ಮೇಲೆ ಭಂಗೀ ಬಸಣ್ಣನ ಅನುಗ್ರಹವಾಯಿತು. ಮಹಾರುದ್ರ, ಕೊಟ್ರಬಸ್ಯ ಮೊದಲಾದವರ ತಾಡಿಗೆ ಅವರಿಳಿದರು. 'ಸ್ವಜಾತೀ

ಯತೆಯೇ ರಾಷ್ಟ್ರೀಯತೆ' ಎಂಬ ಮಹಾಮಂತ್ರೋಪದೇಶವನ್ನು ಪಡೆದು ಪಕ್ಕ ರಾಷ್ಟ್ರೀಯರಾದರು. ಗುರುವನ್ನು ಮೀರಿಸಿದರು. ಉಲ್ಲೂಕೇಶ್ವರನ ವರದರಕ್ಷೆಯಿಂದ ರೆಕ್ಕೆ ಬಲಿಸಿಕೊಂಡು, ಮೀಸೆ ತಿರುವಿ ಭುಲ್ಲವಿಸಿದರು. ಕುರಿಯನ್ನರ ಸರಿಸಮಾನ ಶಿಷ್ಯ ಪರಾಧೀನರೂ, ವಿದ್ಯಾವಂತರೂ, ಸರಸಿಗಳೂ ಯಾರೂ ಇಲ್ಲವೆಂಬ ವಾರ್ತೆ ಇದ್ದಕ್ಕಿದ್ದ ಹಾಗೇ ಹುಟ್ಟಿ ಬೆಳೆದು ಬೇರೂರಿತು. ಎಂ.ಐ.ಟಿ.ಯ ಪ್ರೊಫೆಸರೊಬ್ಬರು 'ರಾಷ್ಟ್ರೀಯ ಭಾವನೆಯಲ್ಲಿ ಕುರಿಯನ್ನರೆದುರು ಭಂಗಿ ಬಸಣ್ಣ, ಕತ್ತೆ ಸಂಕಣ್ಣ ಎಲ್ಲಿ? ಪಾಪ, ಬಡಪಾಯಿಗಳು!' ಎಂದರಂತೆ.

ಸರಿ! ಔದ್ಧತ್ಯದಿಂದ ಉನ್ಮತ್ತರಾದ ಅವರು ರಾಷ್ಟ್ರೀಯ ಭಾವನೆಯಿಲ್ಲದವರನ್ನೆಲ್ಲಾ 'ಕತ್ತೆಗಳು' 'ಕುರಿಗಳು' 'ಹಲ್ಕಾ........ಳು' ಎಂದು ಮುಂತಾಗಿ ಧಿಕ್ಕರಿಸಿದರು. ಅವರ ಕೀರ್ತಿಸೂರ್ಯ ಮಧ್ಯಾಹ್ನಗತನಾದ.

ಕನ್ನಡದಲ್ಲಿ ಇಂಜಿನಿಯರಿಂಗ್ ಸಾಹಿತ್ಯ ಮೊದಲು ಅವರಿಂದಲೇ ಬೆಳೆಯಿತು. 'ಇಟ್ಟಿಗೆ' 'ಅಡಿಗಲ್ಲು' 'ಮೋಟಾರ್ ಹ್ಯಾಂಡ್ಲ್' ಇತ್ಯಾದಿ ಲೇಖನಗಳನ್ನವರು ಬರೆದರು. ಎಂ.ಐ.ಟಿ.ಯ 'ಕಾಲೇಜ್ ಮ್ಯಾಗಜೀನ್' ವಿಶ್ವವಿಖ್ಯಾತವಾಯಿತು.

'Words fails us!' 'Terriffically horrible' 'horribly Terriffic' 'It is the ultimate thing in....!' ಎಂದು ಮುಂತಾಗಿ ವಿಶ್ವದ ಖ್ಯಾತನಾಮರು ಅದನ್ನು ವರ್ಣಿಸಿದರು. ಅದರಲ್ಲಿ ಬರೀ ರಾಷ್ಟ್ರೀಯರ ಲೇಖನಗಳೇ ಇದ್ದುವೆಂದೋ ಅಥವ ಎಂ.ಐ.ಟಿ. ವಿದ್ಯಾರ್ಥಿಸಂಘದ ದುಡ್ಡು ಪೋಲಾಯಿತೆಂದೋ ವಿದ್ಯಾರ್ಥಿಗಳು ಹಣಕಾಸಿನ ಲೆಕ್ಕ ಪತ್ರ ಕೇಳಿದಾಗ 'Go to court' ಎಂದರು ಕುರಿಯನ್ನರು.

ಹಾಗೆ ನನ್ನನ್ನು ವಿರೋಧಿಸಿದವರೆಲ್ಲಾ ಪ್ರತಿಗಾಮಿಗಳು, ಕಮ್ಯುನಿಸ್ಟರು ಎಂದೆಲ್ಲಾ ರೇಗಿದರು. ಮೊದಲು ವಸ್ತುವೇ ಇಲ್ಲದೆ ವಚನದಂತೆ ನೀರಸವಾಗಿದ್ದ ಅವರ ತರಗತಿಗಳು ಇದ್ದಕ್ಕಿದ್ದಂತೆ ಕಾವ್ಯದಂತೆ ರಸಪುಷ್ಟವಾಗಿ ದ್ವೇಷರಸ ಹೊರಸೂಸಲಾರಂಭಿಸಿದವು.

ಅವರ ವಿರೋಧಿಗಳು ಅಶಿಸ್ತಿಗಾಗಿ, ಅಟೆಂಡೆನ್ಸ್ ಕೊರತೆಗಾಗಿ, ಕ್ಲಾಸ್ ಮಾರ್ಕ್ಸ್ ಅಭಾವಕ್ಕಾಗಿ ಪತಿತರಾಗಿ ಅಸು ನೀಗಿದರು. ಅವರ ಅನುನಾಯಿಗಳು ಆರೂಢರಾದರು. ಅನ್ಯಾಯವನ್ನು ವಿರೋಧಿಸಿದಾಗ 'ನನ್ನ ಹತ್ತಿರ ಮಾತೇಕೆ. ಅನ್ಯಾಯ ನೀಗಲು ನ್ಯಾಯ್ಯಾಲಯವಿದೆ. Say it with a writ!' ಎಂದು ವಿಕಟಾಟ್ಟಹಾಸ ಮಾಡಿದರು.

ಅದೂ ಆಯಿತು. ಅಟೆಂಡೆನ್ಸ್ ಇಲ್ಲದವರು; ಕುರಿಯನ್ನರಿಂದ ತರಗತಿಯಲ್ಲಿ ಭಂಗಿತರಾದವರು ಎಲ್ಲರೂ ರಿಟ್ ಜಡಿದರು. ಕುರಿಯನ್ನರ ತಲೆಗೇ ಬಂತು. ಎಂ. ಐ. ಟಿಗೇ ಮೂಲವಾಯಿತು. ಎಂ. ಐ. ಟಿ.ಯ ಡೈರೆಕ್ಟರ್ ಜನರಲ್ ಪ್ರೊ||

ಗೂಫ್ (ಉರಫ್ ಬೇವಕೂಫ್) ಕಣ್ಣಾಣ್ಣ ಬಿಡುವಂತಾಯಿತು. ಈ ಮಧ್ಯೆ ಪ್ರೊ॥ ಕುರಿಯನ್ ಹಾಗೂ ಪ್ರಿ। ಗೂಫ್ ಬರೆದ Mystery of structural Design revealed ಎಂಬ ಗ್ರಂಥಕ್ಕೆ ಅಂತರ ರಾಷ್ಟ್ರೀಯ ಕುಖ್ಯಾತಿ ದೊರೆತು ಮುಗಿಲು ಹಳ್ಳಿಯಲ್ಲಿ ಮಂಡಕ್ಕಿ ಖಾರದಂಗಡಿಗೆ ಅವು ರದ್ದಿ ಕಾಗದ ಸಪ್ಲೈ ಮಾಡ, ವಂತಾಯಿತು. ಬೀದಿಗೊಂದಲವಾಯಿತು. ಹೊಡೆದಾಟವಾಯಿತು.

ಆಗ ಭಂಗೀ ಬಸಣ್ಣನೂ ಕೂಡ "ಸ್ವಜಾತಿಯಂತೆ ರಾಷ್ಟ್ರೀಯತೆಯಾದರೂ, ಗುರುವಿಗೆ ತಿರುಮಂತ್ರ ಹಾಕುವ ನಿನ್ನ ಸಹವಾಸಬೇಡ" ಎಂದು ಕುರಿಯನ್ನರಿಗೆ ಹೇಳಿದ. ಕುರಿಯನ್ನರ ಬಾಲ ಮುದುರಿತು.

ಆದರೆ ಪ್ರೊ॥ ಕುರಿಯನ್ನರು ಕಮ್ಯೂನಿಷ್ಟರಂತೆ ಶಾಂತಿವಾದಿಗಳು ನನ್ನನ್ನು ಕ್ಷಮಿಸಿ. ಉಳಿದವರೊಲ್ಲದಿದ್ದರೆ ಬೇಡ ರಾಷ್ಟ್ರೀಯವಾದಿಗಳು ನನ್ನನ್ನು ಕ್ಷಮಿಸಲೇ ಬೇಕು- ನಾನು ನೀಚನಾದರೇನು? ಉಲ್ಲೂಕ ಭಕ್ತನಲ್ಲವೆ? ಎಂದರು. ಈ ಬಾಣವೂ ಸಾಗಲಿಲ್ಲ.

ಈ ನಡುವೆ ನ್ಯೂಯಾರ್ಕಿನಲ್ಲಿ ಅಂತರ ರಾಷ್ಟ್ರೀಯ ಜ್ಯೋತಿಷ್ಯ ತಜ್ಞರ ಸಭೆ ನೆರವೇರುವ ಸುದ್ದಿ ಬಂತು. ಕುರಿಯನ್ನರು ಅದಕ್ಕೆ ಪ್ರತಿನಿಧಿಗಳಾಗಿ ಹೋಗಲು ಬಯಸಿ 'ಇಂಜಿನಿಯರಿಂಗ್ ಮತ್ತು ಜ್ಯೋತಿಶ್ಶಾಸ್ತ್ರ' ಎಂಬ ಗ್ರಂಥ ಬರೆದರು. ಎಂ. ಐ. ಟಿಯ ಹುಡುಗರು 'ಎಕ್ಸ್‌ಟೆನ್ಸಿವ್ ಸರ್ವೆ ಯಾವಾಗ ಸಾರ್?' ಎಂದು ಕೇಳಿದರೆ 'ಆಗಸ್ಟ್‌ನಗೆ ಬ್ಯಾಡ್ರೋ ಉಡ್ರಾ. ಈಗ ಮಗೆ ಮಳೆ ಐತೆ. ಭಾರಿಮಳೆ ಇದು. ಬೇಕಿದ್ರೆ ಪಂಚಾಗ್ದಾಗೆ ನೋಡ್ರಿ' ಎಂದರು.

"ಸೆಪ್ಟಂಬರಿನಲ್ಲಿ ಕಾಲೇಜು ಚುನಾವಣೆ, ಅಕ್ಟೋಬರಿನಲ್ಲಿ ದಸರೆ, ನವಂಬರಿ ನಲ್ಲಿ ಶುಕ್ರಾಸ್ತ, ಡಿಸೆಂಬರಿನಲ್ಲಿ ಯುವಜನೋತ್ಸವ ಜನವರಿಯಲ್ಲಿ ಟೂರು, ಫೆಬ್ರವರಿ ಯಲ್ಲಿ ಛಳಿ-ಬಿಸಿಲು, ಎಕ್ಸ್‌ಟೆನ್ಸಿವ್‌ಸರ್ವೆ?" ಎಂದು ಪ್ರಶ್ನಿಸಿದ ಹುಡುಗನ ಕೆನ್ನೆಗೆ ಬಾರಿಸಿದರು.

ಸರಿ ಎಂ. ಐ. ಟಿ.ಯಲ್ಲಿ ಸ್ಟ್ರೈಕು ಆರಂಭವಾಯಿತು. ಉಲ್ಲೂಕ ಭಕ್ತರು ಮುರಿದರೂ ಮುರಿಯಲಿಲ್ಲ ಆಗ ಕುರಿಯನ್ ಮತ್ತೆ ಅಡ್ಡ ಬಿದ್ದರು. ಚಂಡಾಲ ಕನ್ಯೆ ಚಕ್ರವರ್ತಿಯನ್ನು ಮದುವೆಯಾಗಲು ಹೋದಾಗ ಏನಾಯಿತು? ಹಾಗೆಯೇ ಇವರ ಪ್ರಸಂಗ.

'ನೀವು ರಾಜೀನಾಮೆ ಏಕೆ ಕೊಡಬಾರದು?" ಎಂದು ಪ್ರಶ್ನಿಸಿದ ಎಂ.ಐ.ಟಿ. ಸ್ಥಾಪಕರಿಗೆ "ವಿದ್ಯಾರ್ಥಿಗಳಲ್ಲಿ ಅಶಿಸ್ತು, ಅವರ ಶೀಲದಲ್ಲಿ ಕೊರತೆ, ಜ್ಞಾನದ ಕೊರತೆ ಇವುಗಳ ವಿರುದ್ಧ ಹೋರಾಡಲು ಪಣ ತೊಟ್ಟಿದೇನೆ. ನಾನೇನೋ ನಿಸ್ವಾರ್ಥಿ ಆದರೆ ಪರೋಪಕಾರಕ್ಕಾಗಿ...." ಎಂದು ಮುಂತಾಗಿ ಅವರು ಉತ್ತರಿಸಿದರಂತೆ.

ಅಲ್ಲದೆ ತಮ್ಮ ಸಹೋದ್ಯೋಗಿಗಳ ದೊಡ್ಡ ಗುಂಪೊಂದಕ್ಕೆ ಅವರು ನಾಯಕರು "ಕಲ್ಕತ್ತಾ, ವಾರಣಾಸಿ ವಿಶ್ವವಿದ್ಯಾಲಯಗಳಂತೆ ನಮ್ಮ ಎಂ. ಐ. ಟಿ.ಯನ್ನೂ


ಮಾಡದ ಹೊರತು ನಮಗೆ ಶಾಂತಿಯಿಲ್ಲ" ಎಂದು ಅವರು ಹೇಳುತ್ತಿದ್ದಾರೆ. ವಿದ್ಯಾರ್ಥಿಗಳು 'ಸ್ವಲ್ಪ ದಿನದಲ್ಲೇ ಇದು ಕಲ್ಕತ್ತಾ, ಕಾಶಿಗಳ ಅಪ್ಪ ಆಗುತ್ತದೆ? ಎನ್ನುತ್ತಿದ್ದಾರೆ.

ಹೋಗಲಿ ಹಾಗೆ ಆಗಲು ಬಿಟ್ಟುಬಿಡುವರೇ ಕುರಿಯನ್? ಇಲ್ಲ. ವಿದ್ಯಾರ್ಥಿಗಳು ಹೂಂ' ಎಂದ ಕೂಡಲೇ ಕ್ಷಮೆ ಬೇಡುತ್ತಾರೆ. ಮೊನ್ನೆ ಮುಗಿಲು ಹಳ್ಳಿಗೆ ನಾನು, ಬಂದ ದಿನ ಅವರು ಐನೂರನೇ ಕ್ಷಮಾಪಣೆ ಬೇಡಿದರು. ಅದರ ಸಲುವಾಗಿ ದಿನಾ ಚರಣೆ ನಡೆಯಿತು. ಅದರಿಂದಲೇ ಕುರಿಯನ್ನರದು 'ಮೀನಚೇತನ' ಎಂದು ನಾನು ಹೇಳುವುದು.

ಕುರಿಯನ್ನರನ್ನು ಪರದೇಶಕ್ಕೆ ಏಕೆ ಕಳಿಸಿಲ್ಲ ಎಂದು ನೀವು ಕೇಳಬಹುದು. ಆದರೆ ರಾಷ್ಟ್ರೀಯ ವಿಶ್ವವಿದ್ಯಾಲಯಗಳು ಅಲ್ಲಿಲ್ಲ ಎಂದವರು ಬಲ್ಲರು. ಅಲ್ಲದೆ 'ನಿಮ್ಮನ್ನೆಲ್ಲಾ ಬಿಡಲು ನನಗಿಷ್ಟವಿಲ್ಲ. ನಾನು ಅಲ್ಲಿಗೆ ಹೋದರೆ ರಾಷ್ಟ್ರೀಯತೆಯ ಜೀವನಾಡಿ ಕುಂಠಿತವಾದೀತು' ಎಂದವರು ಹೇಳಿದ್ದಾರೆ. 'ನಮ್ಮ ಕುರಿಯನ್ ಒಂದು ವ್ಯಕ್ತಿ!' ಎಂದು ಉಲ್ಲೂಕರು ಪ್ರಶಂಸಿಸುತ್ತಿದ್ದಾರೆ. ಹೌದು, ರಾಷ್ಟ್ರೀಯತೆಯ ಊರುಗೋಲು ಅವರು!

'ಚೀನಾ ಒಂದು ಮಹಾರಾಷ್ಟ್ರ. ಅಂತೆಯೇ ಭಾರತವೂ ಸಹ! ನಾವು ಗಾಬರಿ ಪಡಬೇಕಾದುದಿಲ್ಲ!' ಎಂದು ನೆಹರೂ ಹೇಳಿದಾಗ, ಕುರಿಯನ್ನರಂಥ ವ್ಯಕ್ತಿಗಳನ್ನು ಗಮನಿಸಿಯೇ ಹಾಗೆ ಹೇಳಿರಬೇಕು!

—ಆ. ರಾ. ಸೆ.



ಸ್ವತಂತ್ರ ಪಕ್ಷಕ್ಕೆ ಸೇರಿಕೊಂಡಾದರೂ ನೋಡೋಣ—ರುಮಾಲು ಉಳಿಸಿಕೊಳ್ಳಕ್ಕಾಗುತ್ತ್ಯೆ ನೋಡೋಣ.

ಚೀಣೀ ವಚನಗಳು

ಮೂಗಿಲ್ಲದ ಮುಖಕ್ಕೆ ಬಿನ್ನಾಣ ಬೇರೆ
ವಿಕೃತ ವೇಷಧಾರಿಯವನು ಭಂಡನು ಲಜ್ಜೆ ಬಂಢನು !
ತೋರಿ ಪಂಚಶೀಲದ ಬೆಡಗನ್ನು
ತೋಳನಂತೆ ತಿಂದುಂಬುವನು ಮಿತ್ರನೆಂಬುದನ್ನೂ ಮರೆತು

ಮಾರಿ ಮಸಣಿಯೆಂಬುವು ಬೇರಿಲ್ಲ ಕಾಣಿರೋ !
ಮಾರಿಯೆಂಬುದೇನು ? ನೆಲೆಯಲ್ಲಿ ನಿಂತ ಪೋಲೀಸರ ಕೊಂದವಳೆ ಮಾರಿ
ನಾಲಿಗೆ ತಪ್ಪಿ ನುಡಿದವರೆ ಮಾರಿ
ನಮ್ಮ ಸಂಗವ ಕೊಡುವ ಮಾತನ್ನೆ ಮರೆತರೆ ಮಾರಿ !

ಮೊನೆ ತಪ್ಪಿದ ಬಳಿಕ ಅಲಗೇನ ಮಾಡುವುದು ?
ವಿಷ ತಪ್ಪಿದ ಬಳಿಕ ಹಾವೇನ ಮಾಡುವುದು ?
ಭಾಷೆ ತಪ್ಪಿದ ಬಳಿಕ, ದೇಶದಾಸೆಯು ಏರೆ
ಮೀಸಲು ಬನವನ ಮುಟ್ಟಿದಂತೆ ಸಂಗವು ಕೂಡದಯ್ಯಾ !

ಹುಲಿಯ ಹಾಲು ಹುಲಿಗಲ್ಲದೆ ಹೊಲದ ಹುಲ್ಲಿಗೆ ಉಣಿಸಬಾರದು
ಕಲಿಯ ಕಾಲ ತೊಡರು ಛಲದಾಳಿಗಳಲ್ಲದೆ ಇಕ್ಕಬಾರದು.
ಅಳಿದ ಮನದವರಾಸೆಯ ಮೂಗಹಲು ದೋಠಕೊಯ್ವ
ಸಂಗವ ಕೂಡ ಬಯಸಿದವನೂ ಕೂಡ !

ಹಾವಿನ ಹೆಡೆಗಳ ಕೊಂಡು ಕೆನ್ನೆಯ ತುರಿಸುವಂತೆ
ಉರಿವ ಕೊಳ್ಳಿಯಕೊಂಡು ಮಂಡೆಯ ಸಿಕ್ಕ ಬಿಡಿಸವಂತೆ
ಹುಲಿಯ ಮೀಸೆಯ ಹಿಡಿದುಕೊಂಡು ಒಲಿದುಯ್ಯಾಲೆಯಾಡುವಂತೆ
ಸಂಗವ ಕೊಡುವ ನಮ್ಮನು ಕೆಣಕಿ ನಿರಸ ಹೂಡಿದರೆ
ಸುಣ್ಣದ ಕಲ್ಲ ಮಡಿಲಲ್ಲಿ ಕಟ್ಟಿಕೊಂಡು ಮಡುವ ಬಿದ್ದಂತೆ.

ಅಂಜಿದರಾಗದು ಅಳುಕಿದರಾಗದು ಮೆಕಮೋಹನ ಎಂದರಾಗದು
ತಪ್ಪದುವೋ ಲಲಾಟಲಿಖಿತ ! ಕಕ್ಕುಲತೆಗೆ ಬಂದರೆ ಆಗದು ನೋಡಾ
ಧೃತಿಗೆಟ್ಟು ಮನಧಾತುಗೆಟ್ಟರೆ ಅಪ್ಪುದು ತಪ್ಪದು
ಕೂಡುವ ಸಂಗವ ಬೇಡಾ

ಪಂಚಶೀಲವೆ ಕೆಡಿಸಿತ್ತು ಋಣದ ಮಂತ್ರವ ನೀಡಾಡಿತ್ತಲ್ಲಾ ,
ಕರ್ಮಂಗಳನೆ ಕಳೆಯಿತ್ತು ಕ್ರೀಗಳನೆ ಮಾರಿತ್ತಲ್ಲಾ ;
ಆಗಮದ ಹಲ್ಲನೆ ಕಳೆಯಿತ್ತು
ಸಂಗವ ಬೇಡುವನ ಶಕ್ತಿ ಅದೆಗೋ!

ಛಲಬೇಕು ಭಾರತದವಂಗೆ-' ಪರದೇಶವನೊಲ್ಲೆ'ನೆಂಬ
ಛಲಬೇಕು ಭಾರತೀಯಂಗೆ-' ವರಸತಿಯನೊಲ್ಲೆ'ನೆಂಬ
ಛಲಬೇಕು ಭಾರತಿಯಂಗೆ-ಪರದೇಶವ ಬಿಡೆನೆಂಬ
ಛಲಬೇಕು ಭಾರತೀಯಂಗೆ-' ಜನ ಜನಾರ್ದನ ಒಂದೆ'ಂಬ
ಛಲವಿಲ್ಲದವರ ನೆಚ್ಚಬೇಡೆಂದ ನಮ್ಮ ಕೂಡಲ ಸಂಗಮದೇವ

ಜಂಬೂದ್ವೀಪ ನವಖಂಡ ಪೃಥ್ವಿಯೊಳಗೆ ಕೇಳಿರಯ್ಯಾ
ಎರಡಾಳಿನ ಭಾಷೆಯ—
ಕೊಲುವೆನೆಂಬ ಭಾಷೆ ಚೀಣೀಯನದು
ಗೆಲುವೆನೆಂಬ ಭಾಷೆ ಭಾರತದ್ದು !
ಸತ್ಯವೆಂಬ ಕೂರಲಗನೆ ಕಳೆದುಕೊಂಡು
ಸದ್‌ಭಕ್ತರು ಗೆಲುವರು ಕಾಣಾ ಸಂಗವ ಕೂಡಿಪರಯ್ಯಾ!

ನ್ಯಾಯ ನಿಷ್ಠುರಿಗಳು ದಾಕ್ಷಿಣ್ಯಪರರು ನಾವಲ್ಲ
ಲೋಕವಿರೋಧಿ ಚೀಣಿಯಿಗರಿಗಂಜುವವರಲ್ಲ
ಕೂಡಲ ಸಂಗಮ ದೇವರ ರಾಜತೇಜದಲ್ಲಿಪ್ಪರಾಗಿ

ಉಳ್ಳವರು ಹಿಮಾಲಯುವ ಮೆಟ್ಟುವರು
ನಾವೇನ ಮಾಡುವೆವು ಎಂದೆನ್ನೆನಯ್ಯಾ
ಎಮ್ಮ ಕಾಲೇ ಬಂಧು ದೇಹವೇ ಆಯುಧ
ಸಿರ ತಂಪಿಹುದಯ್ಯಾ ಕೂಡಲ ಸಂಗಮದೇವ ಕೇಳಯ್ಯಾ
ಅರಿಶಿನಕ್ಕಳಿವುಂಟು, ಶುಭ್ರತೆಗೆ ಇಲವಯ್ಯಾ !!

ಗಾಂಪರ ಗುಂಪು

"ಗಗನಯಾತ್ರೆ"

"ವೆಂಕಟರಮಣ ಗೋವಿಂದಾ ಗೋವಿಂದ"—ಎಂಬ ಸಂಕಟದ ಕೂಗು ನಭೋ ಮಂಡಲವನ್ನು ಬೇಧಿಸಿಕೊಂಡು ಬಂದಿತು. ಮಠದ ಮುಂದೆ ನಿಂತ ಗಾಂಪರೊಡೆಯರು ಹಿಂದಿರುಗಿ ಮಠದ ದ್ವಾರದ ಕಡೆ ನೋಡಿದರು. ಮಂಕ ಕಣ್ಣಂಚಿನಲ್ಲಿ ನೀರು ತಂದುಕೊಂಡು ತೂರಿಬಂದ. ವಿಮಾನ ಮೈದಾನಕ್ಕೆ ಹೊರಡಲು ಅಣಿಯಾಗಿ ನಿಂತ ಶಿಷ್ಯರೂ ಗುರುಗಳೂ ಈ ಶೋಕದೃಶ್ಯಕ್ಕೆ ಚಿಂತಿಸಿದರು. ಅಳುವ ಕಾರಣವಿರಲಿಲ್ಲ ನಿಜಕ್ಕೂ ಇಂಗ್ಲೆಂಡು ಸೇರಿ ಅಲ್ಲಿನ ಹೊಸ ಅನುಭವದ ಸವಿ ನೋಡಲು ಅವಕಾಶ ಸಿಕ್ಕಾಗ ನಗಬೇಕು. ವೆಂಕಟರಮಣನನ್ನು ನೆನೆಯುವಂತಹ ಸಂಕಟ ಮಂಕಟೇಶನಿಗೇಕೆ ಬಂದಿರಬಹುದು? ಎಂದು ಗಾಂಪರೊಡೆಯರು ಸ್ವತಃ ಕೊಂಚ ಸಂಕಟಪಟ್ಟರು. ನಿಮಿಷಕ್ಕೆ ಮುಂಚೆ ಕನ್ನಡಿಯಲ್ಲಿ ತಮ್ಮ ಧಾಬಳಿಯ ಸೂಟು-ಕೃಷ್ಣಾಜಿನದ ಬೂಡ್ಸು-ತಲೆಗೆ ಹಾಕಿದ ಕಾವಿಯ ಹ್ಯಾಟು ನೋಡಿಕೊಂಡು ಸಂತೋಷಪಟ್ಟಿದ್ದನ್ನೆಲ್ಲಾ ಈ ಮಂಕ ಕದಡಿ ರಾಡಿ ಮಾಡಿಬಿಟ್ಟ. ಹೊರಗೆ ಮಂಗಳ ವಾದ್ಯವೋ ಎಂಬಂತೆ ಮಠದೆದುರಿನ ಇಬ್ಬರು ಹುಡುಗರು ಶಂಖವಾದ್ಯ ಮಾಡುತ್ತಿದ್ದರು. ಇವರನ್ನು ಮೊದಲು ಸಾಗುಹಾಕಿ ಬೀದಿಗೆ ನೆಮ್ಮದಿ ತರುವ ಎಂದೆನ್ನುವ ಹಾದಿ ಕಾದ ಟ್ಯಾಕ್ಸಿ ಅಪ್ಪಣ್ಣ ಒಂದೇ ಸಮ ಟ್ಯಾಕ್ಸಿಯನ್ನು ಅರಚಿಸುತ್ತಿದ್ದ. ಈ ಟ್ಯಾಕ್ಸಿಯಲ್ಲಿ ಗುರುಗಳು-ಮಂಕ-ಮಡೆಯರು ಹೋಗುವುದೆಂದೂ-ಮಿಕ್ಕವರಾದ ಮುಠ್ಠಾಳ ಮರುಳ-ಮಡ್ಡಿ ಇವರುಗಳು ಬುತ್ತಿ ಕಟ್ಟಿಕೊಂಡು ಮುಂಚೆಯೇ ನಟರಾಜರಂತೆ ನಡೆದು ಹೋಗುವುದೆಂದೂ ಏರ್ಪಡಿಸಿತ್ತು. ಅದರಂತೆ ನಡೆದು ಹೋಗುವವರು ಆಗಲೇ ಹಾದಿ ಸವೆಸುತ್ತಿದ್ದರು, ತಲೆಯ ಮೇಲೆ ಸಾಮಾನು ಹೊತ್ತು.

"ಮಂಕಾ-ಏನಿದು ನಿನ್ನ ಸಂಕಟದ ಕೂಗು" ಎಂದು ಗುರುಗಳು ಗುರುಗುಟ್ಟಿದರು.

"ಗುರುಗಳೇ-ಕೈಕಾಲು ನಡುಕ-ಎದೆಯಲ್ಲಿದ್ದ ಹೃದಯ ಗಂಟಲಿಗೆ ಬಂದಿದೆ-ಅಂಗೈ, ಅಂಗಾಲು, ಹಣೆ, ಕತ್ತುಗಳು ಬೆವರಿನಿಂದ ನೆಂದುಹೋಗಿವೆ. ಎಡಗಣ್ಣು ಅದಿರುತಿದೆ, ಎಡಭುಜ ಗುಡುಗುತಿದೆ. ಆಕಾಶದಲ್ಲಿ ಹಾರುವುದೆಂದರೆ ಸಾಮಾನ್ಯವೆ? ಅಭಿಮನ್ಯು ಚಕ್ರಬಿಂಬನ ಕೋಟೆಗೆ ಹೊರಟಾಗ ಈ ಸಂಕಟವೇ ಆಗಿದ್ದಿರಬೇಕು—ನಾ ಒಲ್ಲೆ-ನಾ ಬರಲಾರೆ"

—ಎಂದು ಚಂಡಿಹಿಡಿದ. ಅವನು ಹೇಳಿದ್ದು ಗುರುಗಳಿಗೂ ಅನುಭವವಾಗಿತ್ತು. ಮಂಕ ಬಹಿರಂಗವಾಗಿ ಕೂಗಿ ಹೆದರಿಕೆ ತೋಡಿಕೊಂಡಿದ್ದ. ಆದರೆ ಗಾಂಪರೊಡೆಯರು ಒಳಗೇ ಕಂದಿ ಬೆಂದು ಮೇಲೆ ಮೇಲೆ ನಗುವಿನ ಮುಖವಾಡ ಹಾಕಿದ್ದರು. ಏರೋಪ್ಲೇನಿನಲ್ಲಿ ಹಾರಿಹೋಗುವುದೆಂದರೆ ಹುಡುಗಾಟವೆ? ಜೀವದೊಡನೆ ಜೂಜಾಡುವರುಂಟೆ? ಮನುಷ್ಯ ಮಾಡಿದ ಮಿಷಿನ್ನು ನಂಬಿ ಅಂತರಿಕ್ಷದಲ್ಲಿ ಹಾರುವರುಂಟೆ? ಟ್ಯಾಕ್ಸಿಯವ "ಪೌಂ ಪೌಂ" ಅನ್ನಿಸಿದ. "ನಡಿಯೋ ಮಂಕೇ, ಸತ್ತರೆ ಸಾವಿರ ಅಡಿ ಮೇಲೇ ಸಾಯೋಣ. ಸ್ವರ್ಗಕ್ಕೆ ಅದಷ್ಟು ಹತ್ತಿರದಲ್ಲಿ ಸತ್ತಂತೇ ಆಗೋಲ್ಲವೆ? ವಾಯುವೇಗದಲ್ಲಿ ಸ್ವರ್ಗ ಸೇರಿದಂತೆ ಆಗುತ್ತೆ, ನಡಿ, ನಡಿ" ಎಂದೆನ್ನುತ್ತಾ ಬಂಡಿ ಏರಿದರು. ಮಂಕ ಕಂಬಳಿ ಸುರುಳಿ–ಹಳದಿ ಥಮಾರ್ ಟ್ರಂಕು ತಿಂಡಿ ಬುಟ್ಟಿ ಇತ್ಯಾದಿಗಳನ್ನು ಕಣ್ಣೊರಸಿಕೊಳ್ಳುತ್ತಾ ಟ್ಯಾಕ್ಸಿ ಹಿಂದೆ ಹೇರಿದ. ಬೀದಿಯ ಹುಡುಗರೆಲ್ಲಾ ಕಾರು ಸುತ್ತ ಸೇರಿ "ಗಾಂಪರಿಕೆ ಜೈ" ಎಂದು ಕೂಗಿದರು. ಗಾಂಪರೊಡೆಯರು ಹುಡುಗರಿಗೆಲ್ಲ ತಿಂಡಿಯೋ ಎಂಬಂತೆ ಆಶಿರ್ವಾದದ ಮಂತ್ರಾಕ್ಷತೆ ಹಂಚಿದರು. ಬೀದಿಯ ಹೆಣ್ಣುಮಕ್ಕಳು ಗಂಡುಮಕ್ಕಳೆಲ್ಲಾ ಗಾಂಪರು ಹೊರಟರು ಇನ್ನು ಬೀದಿಗೆ ನೆಮ್ಮದಿ ಸಿಕ್ಕಿತು ಎಂಬ ಕೂಗೊ ಎಂಬಂತೆ ಕೇಕೆ ಹೊಡೆದರು. ಅಪ್ಪಣ್ಣನ ಟ್ಯಾಕ್ಸಿ ಧೂಳನ್ನು ಬೀದಿ ತುಂಬಾ ಹರಡಿ ವಿಮಾನ ಮೈದಾನದತ್ತ ಹೊರಟುಹೋಯಿತು.

* * * * * *

ಧ್ಯಾನಾಸಕ್ತರಾಗಿ ಆಕಾಶ ನೋಡುತ್ತಿದ್ದಾಗೊಮ್ಮೆ ಹಾರುತ್ತಿದ್ದ ವಿಮಾನವನ್ನು ಹಿಂದೊಮ್ಮೆ ಕಂಡಿದ್ದರು ಗಾಂಪರೊಡೆಯರು. ರಕ್ಕೆಗಳನ್ನು ಚಾಚಿ ಹೊಟ್ಟೆಯಲ್ಲಿ ಮಂದಿಯನ್ನು ಹೇರಿಕೊಂಡು ಹೇಗೆ ಹಾರುತ್ತದೆ ಈ ನಿರ್ಜೀವ ಪಕ್ಷಿ? ಎಂದು ಅಚ್ಚರಿಪಟ್ಟರು. ಇವರನ್ನು ಬೀಳ್ಕೊಡಲು ಅನೇಕ ಪುಡಾರಿಗಳು ಬಂದಿದ್ದರು.

"ಗುರುಗಳೇ ಇದು ಹೇಗೆ ಹಾರುತ್ತೆ?" ಎಂದ ಮಂಕ. ಒಂದು ಕ್ಷಣ ಇಸಮು ತಬ್ಬಿಬ್ಬಾದರು.

"ಹಿಂದೆ ಅಥರ್ವಣ ವೇದದಲ್ಲಿನ ಸೂತ್ರದಂತೇ ಇದನ್ನು ಕಟ್ಟಿದ್ದಾರೆ........ ಮಂಕಾ॥ ಪೃಥ್ವಿ ಆಪಸ್ತೇಜೋವಾಯುರಾಕಾಶಾತ್ ॥ ಎಂಬ ಮಂತ್ರ ಕೇಳಿಲ್ಲವೇ– ಪೃಥ್ವಿ–ಭೂಮಿಯ ಮೇಲಿಂದ ಆಪ್–ಅಂದರೆ ಅಪ್‌ಮೇಲೆ ತೇಜೋ–ತೇಜಸ್ಸು– ಬೆಳಕು ಬೆಂಕಿ ಕಂಬಶ್ಚನ್....ಅಂದರೆ ಇಂಜಿನ್ನಿನ ಬೆಂಕಿ–ವಾಯುರ್ ವಾಯು ಮಾರ್ಗದಲ್ಲಿ ಆಕಾಶಾತ್–ಗಗನದಲ್ಲಿ ಹೋಗುವುದು— ಇದೇ ಅದರ ಸೂತ್ರ ಪೆಟ್ರೋಲು ಕುಡಿದು, ಮುಂದಿರುವ ಪಂಖ ತಿರುಗಿ ಎರಡು ರೆಕ್ಕೆಗಳೂ ಬಡಿಯತೊಡಗುತ್ತೆ–ರೆಕ್ಕೆ ಬಡಿದರೆ ಏನಾಗುತ್ತೆ?...."

"ಹಾರಿಹೋಗತ್ತೇ"

"ಶಹಬ್ಬಾಶ್—ಗೊತ್ತಾಯ್ತೋ ಈಗ ಏರೋಪ್ಲೇನು ಹ್ಯಾಗೆ ಹಾರತ್ತೇಂತ?"

" ಗೊತ್ತಾಯ್ತು ಸಾರ್."

" ಬೊಂಬಾಯಿಗೆ ಹೊರಡುವ ಪ್ರಯಾಣಿಕರು ತಮ್ಮ ಸಾಮಾನು ಸರಂಜಾಮು ವಗೈರೆಯೊಡನೆ ತೂಗಿಸಿಕೊಂಡು ಸಿದ್ಧರಾಗಿ"—ಎಂಬ ಕೂಗು ಲೌಡ್ ಸ್ಪೀಕರಿನಿಂದ ತೂರಿಬಂತು. ಮಡೆಯ ಎಲ್ಲ ಸಾಮಾನುಗಳನ್ನೂ ಸಾಗಿಸಿ ತೂಗಿಸಿದ. ಈ ವಿಚಿತ್ರ ಪ್ರಯಾಣಿಕರ ಸಾಮಾನುಗಳೂ ವಿಚಿತ್ರವಿದ್ದವು. "ಎಲ್ಲಾ ಸರಿ ಈ ಬೂದುಗುಂಬಳಕಾಯಿ ಯಾತಕ್ಕೇ?" ಎಂದು ವಿಮಾನ ಕಂಪನಿಯಾತ ಪ್ರಶ್ನಿಸಿದ.

"ನಮ್ಮ ಹುಶಾರಿ ನಾವಿರಬೇಕ್ರೀ—ನಮ್ಮ ಗುರುಗಳಿಗೆ ಮಜ್ಜಿಗೆಹುಳಿ ಅಂದರೆ ಪರಮ ಪ್ರೀತಿ, ಕಾಣದ ಇಂಗ್ಲೆಂಡಿನಲ್ಲಿ ಎಲ್ಲಿ ಬೂದುಗುಂಬಳ ಹುಡುಕುವುದು?.... ನಗಬೇಡ್ರೀ ನಾವೇನು ಹಳೀಕಾಲದ ಗಾಂಪರ ಗುಂಪಿನವರೆಂದು ತಿಳಿದಿರೇನು? ಈ ಬೂದುಗುಂಬಳ ಕಾಯಿಯನ್ನು ಕುದುರೆ ಮೊಟ್ಟೆ ಎಂದು ನಾವು ತೊಗೊಂಡು ಹೋಗ್ತಿದ್ದೇವೇಂತ ನೀವು ತಿಳೀಬೇಡಿ. ನಾವೇನು ಹೆಡ್ಡರಲ್ಲ"—ಎಂದು ಹೇಳುತಾ ತೂಕಮಾಡಲು ಇಟ್ಟ ದೊಡ್ಡ ಚಿಂತಾಲಿನಲ್ಲಿ ಎಲ್ಲ ಸಾಮಾನೂ ಪೇರಿಸಿ ಅದರ ಮೇಲೆ ಗುರುಗಳನ್ನು ಕೂಡಿಸಿ ಎಲ್ಲರೂ ಆ ತೂಕದ ಮಿಷಿನ್ನಿನ ಅಂಚಿನಲ್ಲಿ ಕಷ್ಟಪಟ್ಟು ಸರ್ಕಸ್ಸಿನವರು ನಿಂತಂತೆ ನಿಂತರು. ಬೂದುಗುಂಬಳ ಕಾಯನ್ನು ಮಡೆಯ ಹೆಗಲ ಮೇಲಿಟ್ಟುಕೊಂಡು ಅದರ ಸಮೇತ ಬೀಳುವುದರಲ್ಲಿದ್ದ. ವಿಮಾನಕಂಪನಿಯ ಆಳು ಆ ಸಮಯಕ್ಕೆ ಬಂದು ಈ ಅವಾಂತರ ಕಂಡು, " ಒಬ್ಬೊಬ್ಬರಾಗಿ, ನಿಮ್ಮ ನಿಮ್ಮ ಸಾಮಾನು ತೂಗಬೇಕು. ಎಲ್ಲರೂ ಯಾಕೆ ಹೀಗೆ ಗಾಂಪರೊಡೆಯರ ಹಾಗೆ ಮಾಡ್ತೀರಿ"—ಎಂದಾಗ ಗಾಂಪರೊಡೆಯರಿಗೆ ಅಚ್ಚರಿಯಾಯಿತು. ತಮ್ಮ ಮಠದಲ್ಲಿ ಹಿಂದೆ ನಿಂತ ಮರದ ರೆಂಬೆಯನ್ನೇ ಕಡಿದು ಬಿದ್ದಾತನೊಬ್ಬನ ಕಥೆ ನೆನಪಿಗೆ ಬಂತು. ತಾವು ಗಾಂಪರೊಡೆಯರೆಂದು ಈ ವಿಮಾನ ಕಂಪನಿ ನೌಕರನಿಗೆ ಹೇಗೆ ತಿಳಿಯಿತು?... ಮೇಲೆ ಹಾರುವ ಏರೋಪ್ಲೇನನ್ನೇ ಹತೋಟಿಯಲ್ಲಿಟ್ಟಿರುವ ಶಹಣೆರಿಗೆ ನಾನ್ಯಾರೆಂದು ತಿಳಿಯದಿದ್ದೀತೆ? ಎಂದು ಊಹಿಸಿಕೊಂಡರು. ಈ ಅವಾಂತರದ ಗುರುಶಿಷ್ಯರನ್ನು ಇಳಿಸಿ ಒಬ್ಬೊಬ್ಬರನ್ನೇ ತೂಗಿ ಅವರವರ ಗಂಟು ಮೂಟೆಗೆ ಚೀಟಿ ಕಟ್ಟಿ " ಕೂಗುವವರೆಗೆ ಕಾದಿರಿ " ಎಂದು ಒಂದುಕಡೆ ಕೂಡಿಸಬೇಕಾದರೆ ಸಾಕುಸಾಕಾಗಿಹೋಯಿತು ಇಂತಹ ಪ್ರಯಾಣಿಕರನ್ನೇ ಕಂಡಿರಲ್ಲ ಆ ಏರ್‌ಲೈನ್ಸ್ ಮಂದಿ. ಎಲ್ಲೋ ಒಬ್ಬಿಬ್ಬ ಗಾಂಪರು ಈಗೊಮ್ಮೆ ಈಗೊಮ್ಮೆ ಹಾರುತ್ತಿದ್ದುದ ಬಲ್ಲರು. ಆದರಲ್ಲೂ ಸ್ವರಾಜ್ಯ ಬಂದಮೇಲೆ ಸಂಖ್ಯೆ ಏರಿತ್ತು. ಆದರೆ ಭಾರೀ ನಿಯೋಗವೇ ಒಂದು ಬಾರಿ ವಿಮಾನವನ್ನೇರಿದ್ದು ಕಂಡುದು ಇದೇ ಮೊದಲು.

" ಮರುಳಾ "—ಎಂದರು ಗುರುಗಳು. ಮರುಳ ಓ ಕೊಡಲಿಲ್ಲ. "ಮಂಕಾ" ಎಂದರು, ಬೆತ್ತದ ಕುರ್ಚಿಯಲ್ಲಿ ಒರಗಿ. ಮಂಕನೂ 'ಓ' ಎನ್ನಲಿಲ್ಲ. ಗುರುಗಳ ಬಳಿಯಲ್ಲಿದ್ದ ಮಡ್ಡಿ " ಗುರುಗಳೇ ಏನಪ್ಪಣೆ " ಎಂದ.

" ನೀನೇನು ಮರುಳನೇ–ಮಂಕನೇ "
" ಅಲ್ಲ—ನಾನು ಮಡ್ಡಿ "
" ಮರುಳ–ಮಂಕರೆಲ್ಲಿ ? "
" ಗಂಗೆ–ವೆಂಕಟಲಕ್ಷ್ಮಿ "
" ಹಾಗಂದ್ರೇನೋ...."
" ಪ್ರೇಮಕ್ಕೆ ಕಣ್ಣಿಲ್ಲ ಗುರುಗಳೇ "
" ವಿಮಾನ ಹೊರಡುವ ಹೊತ್ತಾಯ್ತು "
" ಪ್ರಣಯಿಗಳು ಅಗಲುವಾಗ ದುಃಖ ಆಗೇ ಆಗತ್ತೆ ಅಲ್ಲವೇ ಗುರುಗಳೇ "
" ನಿನ್ನ ತಲೆ—ಅಸಂಬದ್ಧ ಪ್ರಲಾಪ "

" ಅಲ್ಲ ನೋಡಿ ಗುರುಗಳೇ " ಎಂದು ವಿಮಾನ ಮೈದಾನದ ಅಂಚಿನ ಬೇಲಿಯ ಬಳಿ ನಿಂತ ಮರುಳ–ಗಂಗೆ, ಮಂಕ–ವೆಂಕಟಲಕ್ಷ್ಮಿ ಜೋಡಿಯಾಗಿ ನಿಂತು ದುಃಖ ತೋಡಿಕೊಳ್ಳುವುದು ಕಂಡರು. ಕ್ಷಣಕಾಲ ತಮ್ಮ ಪೂರ್ವಾಶ್ರಮದ ಪ್ರೇಯಸಿಯ ನೆನಪಾಯಿತು. ಆಕೆ ' ಇವರು ನನಗೆ ಬೇಡ ' ಅಂದಮೇಲೇ ಸನ್ಯಾಸಾಶ್ರಮ ಹಿಡಿದದ್ದು ನೆನಪಿಗೆ ಬಂತು. ಹಾಗೇ ಮರುಳ ಮಂಕರತ್ತ ನೋಡಿದರು. ಗಂಗವ್ವನ ಕಣ್ಣೊರಸಿದ ಮರುಳ. ವೆಂಕಟಲಕ್ಷ್ಮಿಯು ಕೊಟ್ಟ ಪುಳ್ಳಂಗಾಯಿ ಉಂಡೆ ಷರಾಯಿಜೇಬಿಗೆ ಸೇರಿಸಿದ ಮಂಕ. ಲಂಡನ್ನಿನಿಂದ ಬಂದಮೇಲೆ ಲೌಕೀಕಕ್ಕಿಳಿದು ಸಂಸಾರ ನಡೆಸುವ ಭರವಸೆ ಕೊಡುತ್ತಿದ್ದರು ಮರುಳ–ಮಂಕರು. ನವಿರಾಗಿ ಕೈಕೈ ಹಿಸುಕಿದರು. ಲಂಡನ್‌ನಲ್ಲೇ ಈ ಪ್ರಯಾಣ ಆಗಿದ್ದರೆ ಮುತ್ತಿಕ್ಕಬಹುದಿತ್ತಲ್ಲಾ—ಎಂದು ಪೇಚಾಡಿಕೊಂಡರು.

" ಮಡ್ಡೀ-ಹಿಡಿದೆಳೆದು ತಾ ತಾ ಆ ಮರುಳ ಮಂಕರನ್ನು...." ಎಂದು ಕೂಗಿದರು ಗುರುಗಳು. " ಗಾಂಪರೊಡೆಯರು ವಿಮಾನ ಕಂಪನಿ ಕೌಂಟರಿನ ಬಳಿ ಬರಬೇಕು "–ಎಂದು ಕೂಗಿತು ಧ್ವನಿವರ್ಧಕ. ಹೋಗಿ ನೋಡಿದಾಗ ಇವರ ಸಾಮಾನು ತೂಕ ೧೬೦ ಪೌಂಡು ಹೆಚ್ಚಿದೆ ಎಂದೂ ಅದಕ್ಕೆ ಹೆಚ್ಚು ಚಾರ್ಜು ಕೂಡ ಬೇಕೆಂದೂ ಪೀಡಿಸಿದರು.

" ಮಡ್ಡೀ–ಆ ಮರುಳ–ಮಂಕರ ತೂಕವೆಷ್ಟು ? "

" ಇನ್ನೂರಾ ಎಂಭತ್ತೈದು ಪೌಂಡು "

" ಅವರಿಬ್ಬರನ್ನೂ ಇಲ್ಲೇ ಬಿಟ್ಟು ಹೋದರೆ ಗಂಗವ್ವ-ವೆಂಕಟಲಕ್ಷ್ಮಿಯರಿಗೂ ನೆಮ್ಮದಿ ನಮ್ಮ ತೂಕದ ಸಮಸ್ಯೆಯೂ ಕಳೆಯುತ್ತಲ್ಲವೆ ? "

" ಸೊಗಸಾದ ಸಲಹೆ ಗುರುಗುಳೇ " ಎಂದ ಮಡ್ಡಿ. ಏಕೆಂದರೆ ಮರುಳ ಮಂಕ ಬಾರದಿದ್ದರೆ ಇವನಿಗೇ ನೆಮ್ಮದಿ ಅವರ ಗೊರಕೆಯಿಂದ ನಿದ್ರೆಗೆಟ್ಟ ಮಡ್ಡಿ ಈ ಸಲಹೆಗೆ ಹೂಂ ಅಂದಿದ್ದ. ಗುರುಗಳಿಗೆ ವೃಥಾ ಹೆಣಭಾರವಾದ ಹಂಡೆ ಪಾತ್ರೆ ಚೀಲ ಕುಂಬಳಕಾಯಿ ಕೃಷ್ಣಾಜಿನದ ಹಾಸಿಗೆ ಕಮಂಡಲದ ಪೆಟ್ಟಿಗೆ ಸಾಲಿಗ್ರಾಮದ ಮಂದಾಸನದ ಪೆಟ್ಟಿಗೆ ನೆನಪಿಗೆ ಬರಲಿಲ್ಲ. ಮರುಳ ಮಂಕರಿಗೆ ಈ ಸುದ್ದಿಯನ್ನು ಮುಟ್ಟಾಳ

ಮುಟ್ಟಿಸಿದಾಗ ಅವರು ಓಹೋಡಿ ಬಂದರು. ಬಂಹು ನಿಂದಳು, ನಿಂತು ಅತ್ತರು ಗುರುಗಳ ಹೃದಯ ಕರಗಿತು ೧೬೦ ಪೌಂಡಿನಷ್ಟಿದ್ದ ಗೋಹೇಪಟ್ಟಿಯ ಚೀಲ ಕಿತ್ತಿಸದರು.

ಗಂಗವ್ವ ಅತ್ತಳು-ವೆಂಕಟಲಕ್ಷ್ಮಿ ಅತ್ತಳು ಮರುಳ ಅತ್ತ ಷಂಕ ಅತ್ತ ಇದನ್ನ ನೋಡಿ ಸ್ವಯಂ ಗುರುಗಳೂ ಅತ್ತರು. ವಿಮಾನ ನಿಲ್ದಾಣದಲ್ಲಿದ್ದ ಮಂದಿ " ಸದ್ಯ ತೊಲಗಿದರು ನೆಮ್ಮದಿಯಾಯ್ತು " ಎಂದು ನಕ್ಕರು.

ಒಬ್ಬೊಬ್ಬರಾಗಿ ಯಮುನ ಬಾಯಿ ಸೇರುವ ಹಾಗೋ ಎಂಬ ಹೆದರಿಕೆಯಿಂದ ಡಕೋಟಾ ವಿಮಾನವನ್ನೇರಿದರು. ಬಾಗಿಲಲ್ಲಿ ನಿಂತ ಗಗನ ಸಖಿ ಸ್ವಾಗತಿಸಿದಳು. ಇವಳನ್ನು ನೋಡಿದ ಕೂಡಲೇ ಮರುಳ ನಕ್ಕ ಅವಳ ಮುಖದಲ್ಲೂ ಗಂಗೆಯನ್ನು ಕಂಡ. ಯಾಕೆ, ಗುರುಗಳೂ ಅವಳ ಆಕಾರದ ಅಂಕು ಡೊಂಕು ಉಬ್ಬು ಕಂಡು ' ರಾಮ ರಾಮ ' ಎಂದು ಕಿಟಕಿಯ ಬಳಿ ಕುಳಿತರು.

ವಿಮಾನದ ಬಣ್ಣದ ವಿಶಿಷ್ಟವಾಸನೆ ಹೊಡೆಯಿತು. ಗುರುಶಿಷ್ಯರು ಮಂಕು ಬಡಿದ ಮೂದೇವಿಗಳ ಹಾಗೆ ಕುಳಿತರು-ವಿಮಾನದ ಎಂಜಿನ್ನ ತಿರುಗ ತೊಡಗಿತು. ಪಂಚಾಕ್ಷರಿ ಜಪ ಮಾಡಲು ಹೇಳಿದರು ಗ್ರಾಂಪರು ಶಿಷ್ಯರು ಕಣ್ಣು ಮುಚ್ಚಿದರು.

—ದಾಶರಥಿ ದೀಕ್ಷಿತ್



ದೇವಸ್ಥಾನಕ್ಕೆ ಬರೋವಾಗ ನಾಯಿಲ್ ಸೀರೆ ಉಟ್ಟುಕೊಂಡು ಬರಬಾರದಮ್ಮಾ !
ಮೈ ಕಾಣಿಸುತ್ತೆ !!

ನವ್ಯ ಗಾದೆಗಳು

ಕಾಳಿದಾಸನ ಜಯಂತಿ ಪ್ರಯುಕ್ತ

ಎಂಥ ಮೇಘ ಅಂತೀರೀ, ಬಿಚ್ಚಿ ಮಾತಾಡಿದರೆ ಚೊಚ್ಚಲು ಭೂಲೋಕದಲ್ಲಿ ಭದ್ರವಂತೆ

*   *   *   *

ಹೆತ್ತು ಅತ್ತು ಮುತ್ತಿಟ್ಟರೆ ಈಕೆ, ಆತ ಅರಮನೆಯಲ್ಲಿ ನೆನಪಿಲ್ಲದೆ ನಕ್ಕು ಸೊಕ್ಕಿದನಂತೆ.

*   *   *   *

ಇಳಿಯಾ ಮುಳುಗಿದ ಮಗಳಿಗೆ
ಛಳಿಯೇನು ಗಾಳಿಯೇನು ಎಂದನಂತೆ ಕಣ್ವ

*   *   *   *

ಹಾಳಾಗ ಬಲ್ಲ ಅರಸ, ಹೆಸರಾಗಬಲ್ಲನಂತೆ.

*   *   *   *

ಬಡ ಶಕುಂತಲೆಗೆ ಇಜ್ಜೋಡಿ ಸಖಿಯರಂತೆ

*   *   *   *

ಮಂತ್ರಿಸಿದರೆ ಮಾವನ ಮಗಳು ಕವನವನ್ನೂ ಕಟ್ಟಿಸಾಳು ?

*   *   *   *

ರಘು ರಾಮೇಶ್ವರಕ್ಕೆ ಹೋದರೂ, ಶನಿಸಂತಾನ ತಪ್ಪದು !

*   *   *   *

ತೋರುಗಣ್ಣಿಗೆ ಭೋಜರಾಜನ ಬಲಗೈಯಾದರೂ
ಮನೆಗೆ ಬಂದರೆ ಭೋಜನವಿಲ್ಲದೆ ನರಳಿದನಂತೆ

*   *   *   *

ಹೊತ್ತಲ್ಲದ ಹೊತ್ತಿನಲ್ಲಿ ಕೈಹಿಡಿದ ತೊತ್ತಿ ತುತ್ತಿಗೆ ಮಣ್ಣು ಕೂಡಿಸಿದಳಂತೆ.

*   *   *   *

ಕಾಳಿ ಅಮ್ಮ ಹಾಡೋದು ಹೇಳಿ ಕೊಟ್ಟಳು.
—ಹೆಂಡತಿ ಆದರ ಕಲಿಸಿಕೊಟ್ಟಳು–ಕಾಳಿದಾಸನಿಗೆ

*   *   *   *

ಕಾಳಿದಾಸ ಅಯ್ಯೊ ಅಂದರೆ ಶಕುಂತಲೆಯ ನೆತ್ತಿ ತಣ್ಣಗಾಗುತ್ತ್ಯೆ ?
—ಹೊತ್ತು ಬರುವ ಮೊದಲು ?